ಸಂಪುಟ : 8 ಸಂಚಿಕೆ : 214 ಪುಟ : 4 ಬೆಲೆ : 3.00 ಶನಿವಾರ ಸೆಪ್ಟೆಂಬರ್ 30, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 214 Pages : 4 Price : 3.00 Saturday September 30, 2023 Gadag RNI No:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಶಾಲಾ-ಕಾಲೇಜುಗಳಿಗಿಲ್ಲ ರಜೆ । ಜನಜೀವನ ಎಂದಿನಂತೆ

ಪ್ರತಿಭಟನೆಗೆ ಸೀಮಿತವಾದ ಕರ್ನಾಟಕ ಬಂದ್

ಚಂದ್ರಕಾಂತ ಚವ್ಹಾಣ ನೇತೃತ್ವದಲ್ಲಿ ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ಬೆಳಗ್ಗೆಯೇ ಮುಳಗುಂದ ನಾಕಾದಲ್ಲಿ ರಸ್ತೆ ತಡೆ ನಡೆಸಿದರು. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಪ್ರತಿಕೃತಿಗೆ ಅಂತ್ಯಸಂಸ್ಕಾರ ನಡೆಸಿದರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಸಹಿತ ಕರ್ನಾಟಕ ಸಂಸತ್ ಸದಸ್ಯರ ಭಾವಚಿತ್ರಕ್ಕೆ ಮಂಗಳಾರತಿ ಮಾಡಿ, ಬಾಯಿ ಬಡಿದುಕೊಂಡು ಪ್ರತಿಭಟನೆ ನಡೆಸಿದರು.

■ ವಿಜಯಸಾಕ್ಷಿ ಸುದ್ದಿ, ಗದಗ

ತಮಿಳುನಾಡಿಗೆ ಕಾವೇರಿ ನೀರು ಹರಿಸಿರುವುದನ್ನು ವಿರೋಧಿಸಿ ರೈತ ಹಾಗೂ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಬಂದ್, ಜಿಲ್ಲೆಯಲ್ಲಿ ಹೆಚ್ಚಿನ ಕಾವು ಪಡೆದುಕೊಳ್ಳದೆ, ಕೇವಲ ಪ್ರತಿಭಟನೆಗಷ್ಟೇ ಸೀಮಿತವಾಗಿತ್ತು.

ಗದಗ ಸಹಿತ ತಾಲೂಕು ಕೇಂದ್ರಗಳಲ್ಲಿಯೂ ರೈತ ಸಂಘಟನೆಗಳು, ಕನ್ನಡಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಬೀದಿಗಿಳಿದು ಸರಕಾರದ ನಡೆಯನ್ನು ಖಂಡಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಶುಕ್ರವಾರ ಬೆಳಗ್ಗೆಯೇ ಗದಗ-ಬೆಟಗೇರಿ ಅವಳಿ ನಗರದ ಮುಳಗುಂದ ನಾಕಾ, ಕಿತ್ತೂರು ರಾಣಿ ಚನ್ನಮ್ಮ ವೃತ್ತ, ಹುಯಿಲಗೋಳ ನಾರಾಯಣರಾವ್ ವೃತ್ತ ಮತ್ತು ಮಹಾತ್ಮಾ ಗಾಂಧಿ ವೃತ್ತದಲ್ಲಿ ಕನ್ನಡಪರ ಸಂಘಟನೆಗಳು ವಿವಿಧ ರೀತಿಯಲ್ಲಿ ಪ್ರತಿಭಟನೆ ನಡೆಸಿದರು.ಮಹಾತ್ಮಾ ಗಾಂಧಿ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಎಚ್. ಶಿವರಾಮೇಗೌಡ ಬಣ) ಕಾರ್ಯಕರ್ತರು ಹಾಗೂ ಭಾರತೀಯ ಕೃಷಿಕ ಸಮಾಜ, ರಾಷ್ಟ್ರೀಯ ರೈತ ಸಂಘಟನೆ ಜಿಲ್ಲಾ ಘಟಕದ ಕಾರ್ಯಕರ್ತರು ಸಹ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಪ್ರತಿಕೃತಿ ದಹಿಸಿ, ಕೋಣದ ಮುಂದೆ ಕಿನ್ನೂರಿ ಬಾರಿಸುವ ಮೂಲಕ ಜನರ ಗಮನ ಸೆಳೆದರು. ಕರವೇ (ಪ್ರವೀಣ ಶೆಟ್ಟಿ) ಬಣದ ಕಾರ್ಯಕರ್ತರು ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಪ್ರತಿಕೃತಿಯ ಶವಯಾತ್ರೆ ನಡೆಸಿ, ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು, ಉರುಳು ಸೇವೆ ಮಾಡಿ ಪ್ರತಿಭಟಿಸಿದರು.

ಕರ್ನಾಟಕ ಬಂದ್‌ಗೆ ನೀರಸ ಪ್ರತಿಕ್ರಿಯೆ । ಒಮ್ಮತವಿಲ್ಲದ ಸಂಘಟನೆಗಳಿಂದ ಪ್ರತ್ಯೇಕ ಮನವಿ

ಕಾವೇರಿ ಜಲ ವಿವಾದಕ್ಕೆ ಅಂತ್ಯ ಹಾಡಿ

ಉಪತಹಸೀಲ್ದಾರ ಪ್ರಶಾಂತ ಕಿಮಾಯಿ ಮತ್ತು ಕಂದಾಯ ಅಧಿಕಾರಿ ಬಿ.ಎಂ ಕಾತ್ರಾಳ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು. ಪ್ರತಿಭಟನಾಕಾರರು ತಮಿಳುನಾಡು ಮುಖ್ಯಮಂತ್ರಿಯವರ ಪ್ರತಿಕೃತಿಯನ್ನು ದಹಿಸುವ ಮೂಲಕ ತಮ್ಮ ಅಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕರವೇ(ಪ್ರವೀಣಶೆಟ್ಟಿ) ತಾಲೂಕಾಧ್ಯಕ್ಷ ಮಹೇಶ ಕಲಘಟಗಿ, ಅಮರೇಶ ಗಾಂಜಿ, ಮಾಂತೇಶ ತೋಟದ, ಮಂಜುನಾಥ ಗಾಂಜಿ, ಮಲ್ಲನಗೌಡ ಪಾಟೀಲ, ಚಂದ್ರು ಪಾಣಿಗಟ್ಟಿ, ನಾಶೀರಖಾನ ಕಿತ್ತೂರ, ಸಾಹಿಬ್‌ಲಾಲ್ ಕಲೆಗಾರ, ಮುತ್ತು ಹೆಬ್ಬಾಳ, ಈಶ್ವರಗೌಡ ಪಾಣಿಗಟ್ಟಿ, ಬಾಲಾಜಿ, ತೇಜನಗೌಡ ಸೇರಿದಂತೆ ಅನೇಕರಿದ್ದರು.

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕಾವೇರಿ ಬರಿದಾಗಿದ್ದರೂ ತಮಿಳುನಾಡಿಗೆ ನೀರು ಹರಿಸಬೇಕಾದ ಪರಿಸ್ಥಿತಿ ತಂದೊಡ್ಡಿದ ನ್ಯಾಯಾಂಗದ ಕ್ರಮ ಮತ್ತು ಸರ್ಕಾರದ ಧೋರಣೆ-ಯ ವಿರುದ್ಧ ರಾಜ್ಯಾದ್ಯಂತ ವಿವಿಧ ಸಂಘಟನೆಗಳು ಶುಕ್ರವಾರ ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಪಟ್ಟಣದಲ್ಲಿ ಕೆಲವು ಸಂಘಟನೆಗಳು ಪ್ರತ್ಯೇಕ ಹೋರಾಟ ಮಾಡಿದರೂ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ಕೆಲವು ಅಂಗಡಿ ಮುಂಗಟ್ಟುಗಳು ಕೆಲ ಕಾಲ ಮುಚ್ಚಿದ್ದು, ಕೆಲ ಸಮಯ ಬಸ್ ಸಂಚಾರ ಸ್ಥಗಿತಗೊಂಡಿದ್ದು ಹೊರತುಪಡಿಸಿದರೆ ಕಾವೇರಿ ಕಾವು ಕಡಿಮೆಯಿತ್ತು. ವ್ಯಾಪಾರ ವಹಿವಾಟು, ಸಾರಿಗೆ, ಶಾಲಾ-ಕಾಲೇಜುಗಳು ಎಂದಿನಂತೆ ನಡೆದವು. ಸಂಘಟನೆಗಳಲ್ಲಿ ಒಮ್ಮತವಿಲ್ಲದ ಕಾರಣ, ಹೋರಾಟ ಮಹತ್ವ ಕಳೆದುಕೊಂಡಿತು ಎಂಬ ಮಾತುಗಳು ಕೇಳಿಬಂದವು.

ಹೊಸ ಬಸ್‌ನಿಲ್ದಾಣದ ಎದುರಿನಲ್ಲಿ ಜಯಕರ್ನಾಟಕ ಸಂಘಟನೆಯವರು ಕಾವೇರಿ ನೀರು ಬಿಡುಗಡೆ ಮಾಡುವದನ್ನು ವಿರೋಧಿಸಿ ಘೋಷಣೆಗಳನ್ನು ಕೂಗುತ್ತಾ ರಸ್ತೆ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು. ಕಾವೇರಿ ನೀರಿನ ವಿವಾದಕ್ಕೆ ಅಂತ್ಯ ಹಾಡುವ ಮೂಲಕ ರಾಜ್ಯ ಮತ್ತು ಕೇಂದ್ರ ಸರಕಾರಗಳು ಪ್ರತಿವರ್ಷ ಕಾವೇರಿ ನೀರಿಗಾಗಿ ಹೋರಾಟ ಮಾಡುವ ಅನಿವಾರ್ಯತೆಯನ್ನು ತಪ್ಪಿಸಿ, ಕರ್ನಾಟಕದ ಜನತೆಯ ಹಿತ ಕಾಪಾಡಬೇಕು. ಕರ್ನಾಟಕದವರೇ ಆದ ವಕೀಲರನ್ನು ನೇಮಿಸಿದರೆ ಮಾತ್ರ ರಾಜ್ಯಕ್ಕೆ ನ್ಯಾಯ ದೊರಕಲು ಸಾಧ್ಯವಾಗುತ್ತದೆ ಎಂದು ಜಯಕರ್ನಾಟಕ ಸಂಘಟನೆಯವರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಯಕರ್ನಾಟಕ ಸಂಘಟನೆಯ ಅಧ್ಯಕ್ಷ ಇಸ್ಮಾಯಿಲ್ ಆಡೂರ್, ಬಸವರಾಜ ಮೇಲ್ಮುರಿ, ರಮೇಶ ಹಂಗನಕಟ್ಟಿ, ಎಸ್.ಎನ್ ಬಸಾಪೂರ, ಆಯ್.ಎಚ್ ಹರಪನಹಳ್ಳಿ, ಹಾಲಪ್ಪ ಬಂಡಾರಿ, ಗೌಸ್ ಸವಣೂರ, ಅಬ್ದುಲ್‌ಖಾದರ್ ಕೊಪ್ಪಳ, ಮಂಜುನಾಥ ಶಿರಹಟ್ಟಿ, ಪುಟ್ಟಪ್ಪ ಹರಿಜನ, ಸಬೀತ್ ಬಂಕಾಪೂರ, ಇಸಾಕ್ ಬಸವನಕೊಪ್ಪ, ಶಾಹಿದ್ ಮುಂತಾದವರಿದ್ದರು.

ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟೆಂಬರ್ 30 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂಬರ್. 21, 22, 23ರಲ್ಲಿ ಕಗ್ಗನಹಳ್ಳಿ ಅವರ ಲೈನ್, ಹಾರೂಗೇರಿ ಭಾಗ 1,2, ಹೆಬಸೂರ್ ಅವರ ಲೈನ್, ಹೊನ್ನತಮ್ಮ ಭಾಗ 1,2, ಸೋಮನಗೌಡ್ರು ಲೈನ್, ಅಕ್ಕಿಯವರ್ ಲೈನ್, ಗೆಳೆಯರ ಬಳಗ, ಜಂತ್ಲಿ ಹೊಸೂರ್ ಲೈನ್, ಹಳೇ ಲೈನ್, ಕುಂಬಾರ ಓಣಿ ಲೈನ್, ಕಟ್ಟಿ ಲೈನ್, ಗಂಜಿ ಬಸವೇಶ್ವರ ಸರ್ಕಲ್, ಪಡೆಗದವರ ಲೈನ್ ಭಾಗ ಒಂದು- ಎರಡು, ವಾರ್ಡ್ ನಂಬರ್. 22ರಲ್ಲಿ ಗಂಗಿಮಡಿ, ಅಂಬೇಡ್ಕರ್ ನಗರ, ತಾಜನಗರ, ವಾರ್ಡ್ ನಂಬರ್. 01 ರಲ್ಲಿ ಎಸ್ ಎಂ ಕೃಷ್ಣನಗರ ಮೇಲಿನ ಭಾಗ ಕೆಳಗಿನ ಭಾಗ, ವಾರ್ಡ್ ನಂಬರ್. 34, 35 ರಲ್ಲಿ ದೊಡಮನಿ ಜಿಪಿ ಪಾಟೀಲರ ಲೈನ್, ಆದರ್ಶ ನಗರ ಒಂದನೇ ಕ್ರಾಸ್, ಮೂರನೇ ಕ್ರಾಸ್, ಸಚ್ಚಿದಾನಂದ ಮಠ ಲೈನ್, ಈಶ್ವರ್ ಗುಡಿ ಲೈನ್, ವಾರ್ಡ್ ನಂಬರ್. 05ರಲ್ಲಿ ನರಸಾಪುರ ಲೈನ್, ಆಶ್ರಯ ಕಾಲೋನಿಯ ಕೆಲವು ಭಾಗಗಳು, ವಾರ್ಡ್ ನಂಬರ್. 3ರಲ್ಲಿ ಜಮಾದಾರ್ ನಗರ, ಮಸೂತಿ ಲೈನ್, ಸ್ವಾಮಿಯವರ ಲೈನ್, ಈಶ್ವರಗುಡಿ ಲೈನ್, ವಾರ್ಡ್ ನಂಬರ್. 9 ಹಾಗೂ 10 ರಲ್ಲಿ ಸಿಹಿ ನೀರಿನಭಾವಿ ಕಟ್ಟಿ, ಕಲ್ಮನಿಯವರ್ ಲೈನ್, ಮಾನೆದಾರ್ ಲೈನ್, ಮುಳಗುಂದ ಮಲ್ಲಿಕಾರ್ಜುನ್ ಗುಡಿ ಲೈನ್, ಕಬಾಡಿ ಅವರ ಲೈನ್, ಗಣೇಶ ನಗರ, ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ-ಡಿಸಿ ವೈಶಾಲಿ.ಎಂ.ಎಲ್

ಸಾರ್ವಜನಿಕರ ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಸೆಪ್ಟೆಂಬರ 30 ರಂದು ಬೆಳಗ್ಗೆ 10 ಗಂಟೆಯಿಂದ ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದೆ. ಸಾರ್ವಜನಿಕರ ಅಹವಾಲುಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಲು ಇಲಾಖಾ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರದಂದು ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದ ಸಿದ್ಧತೆಗಳ ಕುರಿತಂತೆ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಕಾರ್ಯಕ್ರಮದ ಯಶಸ್ವಿಗೆ ಕುರಿತಂತೆ ಅಧಿಕಾರಿಗಳಿಗೆ ಕಾರ್ಯ ಹಂಚಿಕೆ ಮಾಡಲಾಗಿದೆ. ಎಲ್ಲ ಇಲಾಖಾ ಅಧಿಕಾರಿಗಳು ಖುದ್ದು ಹಾಜರಿದ್ದು ಸಾರ್ವಜನಿಕರ ಅಹವಾಲುಗಳಿಗೆ ಪರಿಹಾರ ಕಲ್ಪಿಸಲು ಮುಂದಾಗಬೇಕು ಎಂದರು.

ಜನತಾ ದರ್ಶನ ಕಾರ್ಯಕ್ರಮ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಪ್ರಮುಖ ಇಲಾಖೆಗಳ ಅಧಿಕಾರಿಗಳ ಪಾತ್ರ ಅಧಿಕವಾಗಿದೆ. ಅಧಿಕಾರಿಗಳು ಕ್ರಿಯಾಶೀಲರಾಗಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸುವ ಮೂಲಕ ಪರಿಹಾರ ನೀಡಬೇಕು. ಜಿಲ್ಲಾ ಉಸ್ತುವಾರಿ ಸಚಿವರ ಮಾರ್ಗದರ್ಶನದಂತೆ ಸಾರ್ವಜನಿಕರ ಅಹವಾಲುಗಳಿಗೆ ತಕ್ಷಣ ಸ್ಪಂದಿಸಬೇಕು ಎಂದರು.

ಅಹವಾಲುಗಳ ಸ್ವೀಕೃತಿಗಾಗಿ ಜಿಲ್ಲಾಡಳಿತ ಭವನದಲ್ಲಿ ತಾಲೂಕುವಾರು ಪ್ರತ್ಯೇಕ ಕೌಂಟರಗಳನ್ನು ತೆರೆಯಲಾಗಿದ್ದು, ತಾಲೂಕುವಾರು ಅರ್ಜಿಗಳ ಸ್ವೀಕೃತಿಗಾಗಿ ನಿಯೋಜಿಸಲಾದ ಅಧಿಕಾರಿ, ಸಿಬ್ಬಂದಿಗಳು ಅಹವಾಲು ಸಲ್ಲಿಸಲು ಆಗಮಿಸುವ ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸಬೇಕು.

ಅಲ್ಲದೆ ಸ್ವೀಕೃತವಾದಂತಹ ಅಹವಾಲುಗಳಿಗೆ ಸಾಧ್ಯವಿದ್ದಲ್ಲಿ ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಕ್ರಮ ವಹಿಸಬೇಕು ಎಂದರು.

ಜಿಲ್ಲಾ ಮಟ್ಟದಲ್ಲಿ ಜನತಾ ದರ್ಶನ ಕಾರ್ಯಕ್ರಮಕ್ಕೆ ತಾಲೂಕುಗಳಿಂದ ತಹಸೀಲ್ದಾರ, ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಮಾತ್ರ ಕಡ್ಡಾಯವಾಗಿ ಆಗಮಿಸಬೇಕು. ಉಳಿದಂತೆ ಇತರೆ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಕಚೇರಿಗಳಲ್ಲಿಯೇ ಕಾರ್ಯನಿರ್ವಹಿಸಬೇಕು.

ಜಿಲ್ಲಾ ಮಟ್ಟದ ಎಲ್ಲ ಇಲಾಖಾ ಮುಖ್ಯಸ್ಥರು ಜನತಾ ದರ್ಶನ ಕಾರ್ಯಕ್ರಮ ಮುಕ್ತಾಯವಾಗುವವರೆಗೆ ಕಡ್ಡಾಯವಾಗಿ ಹಾಜರಿರಬೇಕು ಎಂದು ನಿರ್ದೇಶನ ನೀಡಿದರು.

ಸಭೆಯಲ್ಲಿ ಉಪಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೇಯಿ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಉಪವಿಭಾಗಾಧಿಕಾರಿ ಡಾ.ವೆಂಕಟೇಶ ನಾಯ್ಕ, ಜಿ.ಪಂ. ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಸಚಿವ ಡಾ.ಎಚ್.ಕೆ.ಪಾಟೀಲರಿಂದ ಇಂದು ಜನತಾ ದರ್ಶನ



■ ವಿಜಯಸಾಕ್ಷಿ ಸುದ್ದಿ, ಗದಗ

ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಗದಗ ಜಿಲ್ಲಾಡಳಿತ ಭವನದಲ್ಲಿ ಸೆಪ್ಟೆಂಬರ್ 30 ರ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಜರುಗಲಿದೆ.

ಅಹವಾಲುಗಳನ್ನು ಜಿಲ್ಲಾ ಮಟ್ಟದಲ್ಲಿಯೇ ಆಲಿಸಿ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡು ಜನರ ಅಹವಾಲುಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸಲಾಗುವದು. ಜನತಾ ದರ್ಶನ ಕಾರ್ಯಕ್ರಮದಲ್ಲಿ ಜಿಲ್ಲೆಯ ಸಾರ್ವಜನಿಕರು ಭಾಗವಹಿಸಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಜಿಲ್ಲಾ ಪ್ರವಾಸ



■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರ ಸೆಪ್ಟೆಂಬರ್ 30 ಹಾಗೂ ಅಕ್ಟೋಬರ್ 1ರ ಗದಗ ಜಿಲ್ಲಾ ಪ್ರವಾಸದ ವಿವರ ಇಂತಿದೆ.

ಸೆಪ್ಟೆಂಬರ್ 30 ರಂದು ಬೆಳಿಗ್ಗೆ 10.30 ಗಂಟೆಗೆ ಗದಗ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಜನತಾ ದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಮತ್ತು ವಾಸ್ತವ್ಯ ಮಾಡುವರು.

ಅಕ್ಟೋಬರ್ 1 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಕಾಟನ್ ಸೇಲ್ ಸೊಸೈಟಿಯಲ್ಲಿ ಎಚ್. ಕೆ.ಪಾಟೀಲ ಸೇವಾ ತಂಡದಿಂದ 500 ಜನರಿಗೆ ಕಣ್ಣು ಪರೀಕ್ಷೆ ಹಾಗೂ ಚಸ್ಮಾ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಬೆ.11.30 ಗಂಟೆಗೆ ನಗರದ ತೋಂಟದಾರ್ಯ ಸಿದ್ಧಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 12 ಗಂಟೆಗೆ ಗದಗ ವಿವೇಕಾನಂದ ನಗರದ ಗಾಣಿಗ ಭವನದಲ್ಲಿ ಗದಗ ಜಿಲ್ಲಾ ಗೊಲ್ಲ ಸಂಘದವರಿಂದ ಶ್ರೀ ಕೃಷ್ಣ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮ.12.30 ಗಂಟೆಗೆ ಗದಗ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 1.30 ಗಂಟೆಗೆ ಎಪಿಎಂಸಿ ಯಾರ್ಡ್‌ನ್ ಪಂಚಾಕ್ಷರಿ ಗವಾಯಿಗಳ ಪುಣ್ಯಾಶ್ರಮದಲ್ಲಿ ಸ್ವಾಭಿಮಾನಿ ಕರ್ನಾಟಕ ರಕ್ಷಣಾ ▸▸ ೩ನೇ ಪುಟಕ್ಕೆ

ಇಂದು ಜಿಲ್ಲಾ ಮಟ್ಟದ ಜನತಾ ದರ್ಶನ

ಅಧಿಕಾರಿಗಳಿಗೆ ಕಾರ್ಯ ಹಂಚಿಕೆ ಆದೇಶ

■ ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕರ ಅಹವಾಲುಗಳನ್ನು ಜಿಲ್ಲಾ ಮಟ್ಟದಲ್ಲಿಯೇ ಆಲಿಸಿ, ಸೂಕ್ತ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸೆಪ್ಟೆಂಬರ್ 30 ರಂದು ಬೆಳಗ್ಗೆ 10 ಗಂಟೆಯಿಂದ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಜಿಲ್ಲಾಡಳಿತ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಜನತಾ ದರ್ಶನ ಕಾರ್ಯಕ್ರಮದ ಯಶಸ್ಸಿಗೆ ಅ

ಸಾಕ್ಷಿ ಸುಭಾಷಿತ

ತಾಯಿ ಎಂಬುದು ಮಕ್ಕಳ ಹೃಯದಲ್ಲೂ, ತುಟಿಯ ಮೇಲೂ ಇರುವ ದೇವರ ಹೆಸರು.

–ಸುಭಾಷಿತ

ಸಂಪಾದಕೀಯ

ಕರ್ನಾಟಕ ಬಂದ್ ದಿನವೇ ಬಂದ ಸಂಕಷ್ಟ

ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುವುದನ್ನು ವಿರೋಧಿಸಿ ಕನ್ನಡಪರ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್ ದಿನವೇ ಕರ್ನಾಟಕಕ್ಕೆ ಕಾವೇರಿ ಸಂಕಷ್ಟ ಎದುರಾಗಿದೆ.

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಅಕ್ಟೋಬರ್ 15 ರವರೆಗೆ ತಮಿಳುನಾಡಿಗೆ ಪ್ರತಿನಿತ್ಯ ಮೂರು ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಕರ್ನಾಟಕಕ್ಕೆ ಆದೇಶ ನೀಡಿದೆ. ಯಾವ ಕಾವೇರಿ ನೀರಿಗಾಗಿ ಕರ್ನಾಟಕ ಬಂದ್ ಕರೆ ನೀಡಿತ್ತು ಅದೇ ದಿನವೇ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಬಹುದೊಡ್ಡ ಶಾಕ್ ನೀಡಿದೆ.

ನೀರಿಗಾಗಿ ಕರ್ನಾಟಕದಲ್ಲಿ ಪ್ರತಿಭಟನೆಗಳು ತೀವ್ರಗೊಂಡ ಹಿನ್ನೆಲೆಯಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತುರ್ತು ಸಭೆ ಕರೆದಿತ್ತು. ಪ್ರತಿಭಟನೆಗೆ ಮಣಿದು ನೀರು ಹರಿಸುವುದನ್ನು ನಿಲ್ಲಿಸುವ ಆದೇಶ ನಿರೀಕ್ಷೆಯಲ್ಲಿದ್ದ ರಾಜ್ಯದ ಜನರಿಗೆ ಆಘಾತ ಎದುರಾಗಿದೆ.

ಕರ್ನಾಟಕದ ಪರಿಸ್ಥಿತಿಯ ಅರಿವಿದ್ದರೂ ಮತ್ತು ಅಣೆಕಟ್ಟೆಯಲ್ಲಿ ಇರುವ ನೀರಿನ ಪ್ರಮಾಣದ ಮಾಹಿತಿ ಇದ್ದಾಗಲೂ ಸಹ ಪ್ರಾಧಿಕಾರ ಇಂಥದೊಂದು ಆದೇಶ ನೀಡಿರುವುದು ಅತ್ಯಂತ ದುರ್ದೈವದ ಸಂಗತಿ. ಇದಕ್ಕೆ ಮುಖ್ಯ ಕಾರಣ ಏನು ಎನ್ನುವುದೇ ಈಗ ಸ್ಪಷ್ಟವಾಗುತ್ತಿಲ್ಲ.

ಕರ್ನಾಟಕ ತನ್ನಲ್ಲಿರುವ ನೀರಿನ ಪ್ರಮಾಣವನ್ನ ಮತ್ತು ಪರಿಸ್ಥಿತಿಯನ್ನ ಪ್ರಾಧಿಕಾರ ಮತ್ತು ಸುಪ್ರೀಂ ಕೋರ್ಟ್ ಮುಂದಿಡುವಲ್ಲಿ ವಿಫಲವಾಗಿದೆ ಎನ್ನುವ ಅನುಮಾನ ಮತ್ತೊಮ್ಮೆ ವ್ಯಕ್ತವಾಗುತ್ತಿದೆ.

ರಾಜ್ಯ ಸರ್ಕಾರ ಈ ವಿಷಯದಲ್ಲಿ ಸ್ಪಷ್ಟವಾದಂತಹ ಮಾಹಿತಿಯನ್ನು ಜನರ ಮುಂದಿಡುವ ಪ್ರಯತ್ನ ಮಾಡಬೇಕು. ಇಲ್ಲವೇ ಪ್ರಾಧಿಕಾರ ಅವೈಜ್ಞಾನಿಕವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ ಎನ್ನುವ ಆರೋಪವನ್ನಾದರೂ ಮಾಡಬೇಕು.

ಇದ್ಯಾವುದನ್ನು ಮಾಡದೆ ಪ್ರಾಧಿಕಾರದ ಆದೇಶವನ್ನ ಕಣ್ಮುಚ್ಚಿ ಪಾಲನೆ ಮಾಡುವ ಹಿಂದಿನ ಅನಿವಾರ್ಯತೆ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು. ತಮಿಳುನಾಡು ಸರ್ಕಾರ ಇಂಡಿಯಾ ಮೈತ್ರಿಕೂಟದ ಸೇರಿರುವುದರಿಂದ ಈ ಸಮಸ್ಯೆಗೆ ರಾಜಕೀಯ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ.

ಇಂಡಿಯಾ ಮೈತ್ರಿಕೂಟ ಕೇವಲ ರಾಜಕಾರಣಕ್ಕೆ ಸೀಮಿತವಾಗದೆ ಎರಡು ರಾಜ್ಯಗಳ ಸಮಸ್ಯೆ ಪರಿಹಾರಕ್ಕೂ ಮುಂದಾದಲ್ಲಿ ಭವಿಷ್ಯದಲ್ಲಿ ರಾಜಕೀಯ ಲಾಭಗಳು ಸಿಗುವ ಸಾಧ್ಯತೆಗಳು ಹೆಚ್ಚಿವೆ. ಈ ನಿಟ್ಟಿನಲ್ಲಿಯೂ ರಾಜ್ಯ ಸರ್ಕಾರ ಯೋಚನೆ ಮಾಡಬೇಕಿದೆ. ಜನರ ಸಹನೆಯ ಕಟ್ಟೆಯೊಡೆಯುವ ಮುನ್ನವೇ ಸರಕಾರ ಕಠಿಣ ನಿರ್ಧಾರ ಕೈಗೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಜನರೇ ರಾಜಕೀಯ ನಿರ್ಧಾರ ಕೈಗೊಳ್ಳಬೇಕಾಗುತ್ತದೆ.

ಪುಸ್ತಕ ಪರಿಚಯ

ಮರುಳಶಂಕರರ ಜೀವನ ಚರಿತ್ರೆಯ 'ಅನುಭಾವ ಯಾತ್ರೆ'

'ನಿಜಪ್ರಸಾದಿ ಮರುಳಶಂಕರದೇವರು'

ಕನ್ನಡದಲ್ಲಿ ಶಿವಶರಣರ ಕುರಿತು ಅಸಂಖ್ಯ ಕೃತಿಗಳು ರಚನೆಯಾಗಿವೆ. ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಸಿದ್ಧರಾಮ ಸೇರಿದಂತೆ ಮುಖ್ಯವಾಹಿನಿಯ ಶರಣರನ್ನು ಕುರಿತು ರಚನೆಯಾಗಿರುವ ಕಾವ್ಯ, ಕಥೆ, ಕಾದಂಬರಿಗಳು ರೂಪುಗೊಂಡಿವೆ. ಆದರೆ ದೂರದ ಅಫಘಾನಿಸ್ತಾನದಿಂದ ಕಲ್ಯಾಣಕ್ಕೆ ಬಂದು 'ನಿಜಪ್ರಸಾದಿ' ಎಂದು ಹೆಸರು ಪಡೆದಿದ್ದ ಮರುಳಶಂಕರದೇವರ ಬಗ್ಗೆ ಬಂದಿರುವ ಕೃತಿಗಳು ವಿರಳ. ಹರಿಹರನು ದೀಘಈ ರಗಳೆಯ ಮೂಲಕ ಮರುಳಶಂಕರರ ವ್ಯಕ್ತಿಚಿತ್ರವನ್ನು ಚಿತ್ರಿಸಿದ್ದಾನೆ. ಚಾಮರಸನು 'ಪ್ರಭುಲಿಂಗಲೀಲೆ'ಯ ಪ್ರಾರ್ಥನಾ ಪದ್ಯಗಳಲ್ಲಿ 'ಮರುಳಶಂಕರದೇವರಿಗೆ ಶರಣು ಶರಣಾರ್ಥಿ' ಎಂದಿದ್ದಾನೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಿದ್ಧಯ್ಯ ಪುರಾಣಿಕರು 'ಶರಣ ಚರಿತಾಮೃತ'ದಲ್ಲಿ ಇವರ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ. ಎಚ್.ತಿಪ್ಪೇರುದ್ರಸ್ವಾಮಿಯವರು ಅಲ್ಲಮನ ಕುರಿತ ಕಾದಂಬರಿಯಲ್ಲಿ ಮರುಳಶಂಕರರ ಬಗ್ಗೆ ಸ್ವಲ್ಪ ಮಾಹಿತಿ ದೊರೆಯುತ್ತದೆ. ಆದರೆ ಮರುಳಶಂಕರದೇವರನ್ನು ಕಥಾನಾಯಕನನ್ನಾಗಿಸಿ ಇದುವರೆಗೂ ಯಾವುದೇ ಕೃತಿಯೂ ರಚನೆಯಾಗಿರಲಿಲ್ಲ. ಈ ಕೊರತೆಯನ್ನು ವೃತ್ತಿಯಿಂದ ವೈದ್ಯರು, ಪ್ರವೃತ್ತಿಯಿಂದ ಶರಣ ಸಾಹಿತಿಯಾದ



ದಯಾನಂದ ನೂಲಿಯವರು ನೀಗಿಸಿದ್ದಾರೆ.

ಕೃತಿಯ ಶೀರ್ಷಿಕೆಯಲ್ಲಿಯೇ ಇದೊಂದು 'ಅನುಭಾವ ಯಾತ್ರೆ' ಎಂದು ಹೇಳಿರುವ ಲೇಖಕರು, ಮರುಳಶಂಕರರ ಜೀವನ ಚರಿತ್ರೆಯನ್ನು ಆತ್ಮಕಥಾನಕ ಶೈಲಿಯಲ್ಲಿ ನಿರೂಪಿಸಿದ್ದಾರೆ. ತಮ್ಮ ಜೀವನ ಚರಿತ್ರೆಯನ್ನು ತಾವಿರುವ ದೇಶ, ಕಾಲ, ಪರಿಸರ, ಸಾಧನೆ–ಸಿದ್ಧಿ, ತಮ್ಮ ಸಂಪರ್ಕಕ್ಕೆ ಬಂದ ವ್ಯಕ್ತಿಗಳ ಪರಿಚಯವನ್ನು ಮರುಳಶಂಕರರೇ ಮಾಡಿಸಿದಂತೆ ಚಿತ್ರಿಸಲಾಗಿದೆ. ಇಹದಲ್ಲಿದ್ದೂ ಪರದ ಚಿಂತನೆ ನಡೆಸಿದ ಶರಣರು ವಚನಗಳಲ್ಲಿ ತಮ್ಮ ವೈಯಕ್ತಿಕ ವಿವರಗಳನ್ನು ಹೇಳಿಕೊಂಡಿರುವುದು ಕಡಿಮೆ. ಮರುಳಶಂಕರರಂಥ ಶರಣರ ವಿಚಾರಗಳು ಇನ್ನೂ ಗೌಣವಾಗಿಯೇ ಉಳಿದಿವೆ. ಇಂತಹ ಸಂದರ್ಭದಲ್ಲಿ ವಿಶಿಷ್ಟ ನಿರೂಪಣೆಯ ಈ ಕೃತಿಯು ಸಾಹಿತ್ಯವನ್ನು ವೈವಿಧ್ಯಮಯ ಮತ್ತು ಪರಿಣಾಮಕಾರಿಯಾಗಿಸುವ ನವೀನ ಪ್ರಯತ್ನವೆನಿಸುತ್ತದೆ.

ಮರುಳಶಂಕರರ ಅನುಭಾವ ಯಾತ್ರೆಯು ಅಫಘಾನಿಸ್ತಾನದಿಂದ ಆರಂಭವಾಗುತ್ತದೆ. ಒಂದು ಕಾಲಕ್ಕೆ ಹಿಂದೂಗಳ ವಾಸಸ್ಥಾನವಾಗಿದ್ದು, ಶಿವಭಕ್ತರ ನೆಲೆಯಾಗಿದ್ದ 'ಈ ದೇಶವು ಜಗತ್ತಿಗೆ ಉತ್ತಮ ತಳಿಯ ಕುದುರೆಗಳನ್ನು ಪೂರೈಸುತ್ತಿತ್ತು; ಬುಡಕಟ್ಟು ಜನರು ವಾಸಿಸುವ ದೇಶವಾಗಿತ್ತು' ಎಂಬ ಸಂಗತಿಗಳು ಇತಿಹಾಸದ ಜಿಜ್ಞಾಸೆಗೆ ಪ್ರೇರೇಪಿಸುತ್ತವೆ. 'ಉಪ ಗಣ ಸ್ಥಾನ–ಅಪಘಾನಿಸ್ತಾನ' ಹಾಗೂ 'ಅಶ್ವ ಗಣ ಸ್ಥಾನ–ಅಪಘಾನಿಸ್ತಾನ' ಎಂಬ ವ್ಯುತ್ಪತ್ತಿ ಸಾಧ್ಯತೆಗಳು ಇನ್ನಷ್ಟು ಕುತೂಹಲವನ್ನು ಕೆರಳಿಸುತ್ತವೆ.

ನಾಥ ಪಂಥ, ಸೂಫಿ ಪಂಥ ಮತ್ತು ಇಸ್ಲಾಂ ಧರ್ಮದ ಇತಿಹಾಸ ಮತ್ತು ತಾತ್ವಿಕ ವಿವರಗಳು ಕೃತಿಯ ಮಹತ್ವವನ್ನು ಹೆಚ್ಚಿಸಿವೆ. ಜೊತೆಗೆ ಸೂಫಿಗಳು ಮತ್ತು ಶರಣರು ಜನಸಾಮಾನ್ಯರ ಬದುಕನ್ನು ಹಸನುಗೊಳಿಸಲು ಮಾಡಿದ ಪ್ರಯತ್ನಗಳ ವಿವರಗಳು ಮನಮುಟ್ಟುವಂತೆ ಚಿತ್ರಿತವಾಗಿವೆ. ಪ್ರಾಚೀನ ಮಹಾಕಾವ್ಯಗಳ ಅವಿಭಾಜ್ಯ ಅಂಗಗಳಲ್ಲೊಂದಾದ ಪ್ರಕೃತಿ ವರ್ಣನೆಯನ್ನು ಕೃತಿಯಲ್ಲಿ ಸಾದ್ಯಂತವಾಗಿ ಚಿತ್ರಿಸಿದ್ದಾರೆ. ಪಂಪನ ಬನವಾಸಿ ವರ್ಣನೆಯಂತೆ, ಈ ಕೃತಿಯಲ್ಲಿ ಕಾಶ್ಮೀರ, ವಿದಿಶಾ, ಗ್ವಾಲಿಯರ್, ಉಜ್ಜಯಿನಿ, ಬೀಡ ಮುಂತಾದ ಪ್ರದೇಶಗಳನ್ನು ವರ್ಣಿಸಲಾಗಿದೆ.

ಮರುಳಶಂಕರರು ಅಫಘಾನಿಸ್ತಾನದಿಂದ ಬಂದು, ಕಲ್ಯಾಣದಲ್ಲಿ 'ಗುಪ್ತ ಪ್ರಸಾದಿ'ಯಾಗಿದ್ದರು. ಈ ಗುಪ್ತಗಾಮಿನಿ ಶರಣನನ್ನು ಅಲ್ಲಮನು ಗುರುತಿಸಿ, ಎಲ್ಲರಿಗೂ ತೋರಿಸುತ್ತಾನೆ. ಶೂನ್ಯ ಸಂಪಾದನೆಯಲ್ಲಿ ಕೇವಲ ಇಪ್ಪತ್ತು ಪುಟಗಳಲ್ಲಿ ಮರುಳಶಂಕರರ ವಿವರವು ಚಿತ್ರಣಗೊಂಡಿದೆ. ಈ ಪ್ರಸಂಗದ ತಿರುಳನ್ನು ಹಿಡಿದು ಲೇಖಕರು 752 ಪುಟಗಳ ಸುದೀರ್ಘ ಹಾಗೂ ಸುಂದರ ವೃತ್ತಾಂತವನ್ನು ಹೆಣೆದಿದ್ದಾರೆ.

ಮರುಳಶಂಕರರು ಕಲ್ಯಾಣದ ಶರಣರಲ್ಲಿ ಅಪರೂಪದ ವ್ಯಕ್ತಿತ್ವದವರಾಗಿದ್ದರು. ಮಹಾಮನೆಯ ಪ್ರಸಾದ ಕೋಣೆಯಲ್ಲಿ ಶರಣರು ಪ್ರಸಾದ ಸೇವಿಸಿದ ತಟ್ಟೆಗಳನ್ನು ತೊಳೆಯುವ ಕಾಯಕ ಮಾಡುತ್ತ ಶಿವಧ್ಯಾನದಲ್ಲಿ ತೊಡಗಿರುತ್ತಿದ್ದರು. ಒಂದಗುಳು ಅನ್ನವೂ ಕೆಡಬಾರದೆನ್ನುವ ಕಾಯಕನಿಷ್ಠೆ ಇವರದಾಗಿತ್ತು.

ಬಸವಣ್ಣ ಸೇರಿದಂತೆ ಸುತ್ತಲಿನ ಶರಣರಿಗೆ ಕಾಣದ ಮರುಳಶಂಕರನೆಂಬ ಚಿದ್ಬೆಳಕು ಅಲ್ಲಮನಿಗೆ ಗೋಚರಿಸಿತು. ಇಂತಹ ಅಪರೂಪದ ಶರಣನ ಜೀವನ ವೃತ್ತಾಂತ, ಅನುಭಾವಿಕ ವ್ಯಕ್ತಿತ್ವವು ಆಧುನಿಕ ಸಾಹಿತ್ಯ ರೂಪದಲ್ಲಿ ಮರುರೂಪ ಪಡೆದಿಲ್ಲ.

ಈ ಕೊರತೆಯನ್ನು ಡಾ. ದಯಾನಂದ ನೂಲಿಯವರ 'ಮರುಳಶಂಕರದೇವರು' ಸಮರ್ಥವಾಗಿ ಭರಿಸುತ್ತದೆ. ಈ ಕೃತಿಯು ಮರುಳಶಂಕರದೇವರ ಆತ್ಮಕಥನದ ಮೂಲಕ ಮರೆತುಹೋದ ಇತರ ನಿರ್ಲಕ್ಷಿತ ಶರಣರನ್ನು ಪರಿಚಯಿಸುತ್ತದೆ. ಆಧುನಿಕ ಭೋಗ ಜೀವನದಲ್ಲಿ ಮರೆಯಾಗಿರುವ ಪ್ರಸಾದ ತತ್ವದ ಮಹತ್ವವನ್ನೂ ಕೃತಿಯು ಸಾರುತ್ತದೆ. ಇದು ಈ ಕೃತಿಯ ಸಮಕಾಲೀನತೆಗೆ ಸಾಕ್ಷಿಯಾಗಿದೆ. ದೂರದ ಅಫಘಾನಿಸ್ತಾನದಿಂದ ಬಂದು, ಶರಣ ಚಳವಳಿಯಲ್ಲಿ ಭಾಗವಹಿಸಿ, ಕನ್ನಡ ಕಲಿತು, ವಚನ ರಚನೆ ಮಾಡಿದ ಮರುಳಶಂಕರದೇವರ ಈ ಅನುಭಾವ ಯಾತ್ರೆಯು ನಮ್ಮ ನಾಡು–ನುಡಿಯ ಬಗೆಗಿನ ಅಭಿಮಾನವನ್ನು ಬಡಿದೆಬ್ಬಿಸುವ ಕೃತಿಯಾಗಿದೆ. ಆದ್ದರಿಂದ ಪ್ರತಿಯೊಬ್ಬ ಕನ್ನಡಿಗನೂ ಶ್ರದ್ಧೆಯಿಂದ ಓದಲೇಬೇಕಾದ ಕೃತಿಗಳಲ್ಲಿ ಇದೂ ಒಂದಾಗಿದೆ.

– ಡಾ. ರಾಜಶೇಖರ ಬಿರಾದಾರ.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಶ್ರೀ ಸಿ.ಎಂ ಮಾಮನಿ ಸಪ್ರದ ಕಾಲೇಜು, ಯರಗಟ್ಟಿ.

ಎಂ.ಎಚ್ ಸವದತ್ತಿಯವರಿಗೆ 'ಉತ್ತಮ ವಿಜ್ಞಾನ ಶಿಕ್ಷಕ' ಪ್ರಶಸ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಮಾತೋಶ್ರೀ ಸಾವಿತ್ರಮ್ಮ ಚಾರಿಟೇಬಲ್ ಟ್ರಸ್ಟ್ ಮುಂಡರಗಿಯ ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವರಾದ ಎಸ್.ಎಸ್ ಪಾಟೀಲ್, ಉಪನಿರ್ದೇಶಕ(ಆಡಳಿತ) ಎಂ.ಎ ರಡ್ಡೇರ, ನಿವೃತ್ತ ಲೋಕಾಯುಕ್ತ ಡಿವೈಎಸ್‌ಪಿ ಎಸ್.ಎಸ್ ರೋಣದ, ಬ್ರಿಗೆಡಿಯರ್ ಸುಧೀಂದ್ರ ಇಟ್ನಾಳ್, ಪ್ರೊ. ಸಿ.ಡಿ ಪಾಟೀಲ್, ಪ್ರೊ. ಕೆ.ಎಸ್ ಕೌಜಲಗಿ ಹಾಗೂ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಗಂಗಾಧರ ಅಣ್ಣಿಗೇರಿ ಅವರ ಗೌರವ ಉಪಸ್ಥಿತಿಯಲ್ಲಿ ಏಕಲಾಸಪೂರದ ಸರ್ಕಾರಿ ಪ್ರೌಢಶಾಲೆಯ ಎಂ.ಎಚ್ ಸವದತ್ತಿ ಅವರಿಗೆ 'ಉತ್ತಮ ವಿಜ್ಞಾನ ಶಿಕ್ಷಕ' ಪ್ರಶಸ್ತಿ ಪ್ರಧಾನ ಮಾಡಿದರು.

ಬೀಚಿ ಬಳಗದ ಪಾಕ್ಷಿಕ ಸಭೆಯಲ್ಲಿ ಉದ್ಯಮಿ ಜಗದೀಶ ಸಂಕನಗೌಡ್ರ ಅಭಿಮತ

ಬೀಚಿಯವರಂತೆ ಬರೆಯುವವರು ವಿರಳ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಹಾಸ್ಯಬ್ರಹ್ಮ ಬೀಚಿ ನಿರ್ಭಿಡೆಯ ಬರಹಗಾರರಾಗಿದ್ದರು. ತಮಗೆ ಸರಿಯೆನ್ನಿಸಿದ್ದನ್ನು ಯಾವ ಮುಲಾಜಿಲ್ಲದೆ ಹೇಳುವ ಸ್ವಭಾವವನ್ನು ಹೊಂದಿದ್ದರು. ಇದರಿಂದ ಅವರು ಅನೇಕರ ಕೋಪಕ್ಕೆ ಗುರಿಯಾಗಬೇಕಾಯಿತಾದರೂ ಎಂದಿಗೂ ಅವರು ಅದರ ಬಗ್ಗೆ ಯೋಚಿಸಲಿಲ್ಲ ಎಂದು ಉದ್ಯಮಿ ಜಗದೀಶ ಸಂಕನಗೌಡ್ರ ಹೇಳಿದರು.

ಇಲ್ಲಿನ ಶಿಕ್ಷಕ ಎಂ.ಕೆ ಬೇವಿನಕಟ್ಟಿಯವರ ಮನೆಯಲ್ಲಿ ಜರುಗಿದ ಬೀಚಿ ಬಳಗದ ಪಾಕ್ಷಿಕ ಸಭೆಯಲ್ಲಿ ಅವರು ಮಾತನಾಡಿದರು.

ಬೀಚಿಂಯವರಂತೆ ಬರೆಯುವವರು ವಿರಳ. ಅವರು ಹೇಳಿದಂತೆ ಬದುಕಿದರು, ಬದುಕಿದಂತೆ ಬರೆದರು. ಹಾಸ್ಯದೊಂದಿಗೆ ನಿಶ್ಚಿತವಾದ ಒಂದು ಸಂದೇಶವನ್ನು ನೀಡಿ ಓದುಗನ ಮನವನ್ನು ಅರಳಿಸುವ ಕೆಲಸವನ್ನು ಬೀಚಿ ಮಾಡಿದ್ದಾರೆ. ಬೀಚಿಯವರ ಕೃತಿಗಳನ್ನು ಓದುತ್ತ ಹೋದಂತೆ ಲೋಕ ಜ್ಞಾನದ ವಿಸ್ತಾರವೂ ಆಗುತ್ತದೆ ಎಂಬ ಭಾವನೆ ವ್ಯಕ್ತಪಡಿಸಿದರು.

ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಮಾತನಾಡಿ, ನರೇಗಲ್ಲದಲ್ಲಿ ಬೀಚಿ ಬಳಗ ಸ್ಥಾಪನೆಯಾದದ್ದು ಓದುಗರನ್ನು ಹೆಚ್ಚಿಸುವ ದೃಷ್ಟಿಯಿಂದ. ಸದಸ್ಯರಲ್ಲಿ ಮಾತನಾಡುವ ಕಲೆಯನ್ನು ಬೆಳೆಸುವುದು ಬಳಗದ ಮುಖ್ಯ ಉದ್ದೇಶವಾಗಿದೆ ಎಂದರು.

ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ ಮಾತನಾಡಿ, ಬರುವ ಡಿಸೆಂಬರ್ 10ರ ಬೀಚಿ ಬಳಗದ ದಶಮಾನೋತ್ಸವಕ್ಕೆ ಎಲ್ಲರೂ ಸಿದ್ಧರಾಗೋಣ.

ಈಗಾಗಲೆ ಸದಸ್ಯತ್ವ ಅಭಿಯಾನ ಕಾರ್ಯ ಪ್ರಾರಂಭವಾಗಿದ್ದು, ಎಲ್ಲರೂ ಇದಕ್ಕಾಗಿ ಸ್ವಪ್ರೇರಣೆಯಿಂದ ಕಾರ್ಯ ನಿರ್ವಹಿಸೋಣ ಎಂದರು.

ಸಭೆಯನ್ನುದ್ದೇಶಿಸಿ ನಿಕಟಪೂರ್ವ ಅಧ್ಯಕ್ಷ ಸುರೇಶ ಹಳ್ಳಿಕೇರಿ, ಹಿಂದಿನ ಅಧ್ಯಕ್ಷ ಡಿ.ಎ ಅರವಟಗಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಕ ಎಂ.ಕೆ. ಬೇವಿನಕಟ್ಟಿ ಸ್ವಾಗತಿಸಿದರು. ಸಭೆಯಲ್ಲಿ ಅರುಣ ಬಿ.ಕುಲಕರ್ಣಿ, ಎಂ.ಎಸ್ ದಢೇಸೂರಮಠ ಅವರನ್ನು ಶಿಕ್ಷಕ ಮಹಾದೇವಪ್ಪ ಬೇವಿನಕಟ್ಟಿ ಸನ್ಮಾನಿಸಿದರು.

ಬಳಗದ ಅಧ್ಯಕ್ಷ ಕೆ.ಎಸ್ ಕಳಕಣ್ಣವರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಿ.ಟಿ ತಾಳಿ ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ಭಾರತಿ ಶಿರ್ಸಿ, ನಿರ್ಮಲಾ ಹಿರೇಮಠ, ಆರ್.ಎಸ್ ನರೇಗಲ್ಲ, ಕುಂಬಾರ, ಸಿ.ಕೆ ಕೇಸರಿ, ಎ.ಜೆ ಪಾಟೀಲ, ಬಳಗದ ಸಂಚಾಲಕ ಈಶ್ವರ ಬೆಟಗೇರಿ, ಉಪನ್ಯಾಸಕ ನಿಂಗರಾಜ ಬೇವಿನಕಟ್ಟಿ ಸೇರಿದಂತೆ ಬೇವಿನಕಟ್ಟಿಯವರ ಕುಟುಂಬದ ಸದಸ್ಯರು ಇದ್ದರು. ಖಜಾಂಚಿ ಶಿವಯೋಗಿ ಜಕ್ಕಲಿ ನಿರೂಪಿಸಿದರು. ಕಾರ್ಯದರ್ಶಿ ಎಚ್.ವೈ ಈಟಿ ವಂದಿಸಿದರು.

2660ನೇ ಶಿವಾನುಭವ ಕಾರ್ಯಕ್ರಮದಲ್ಲಿ ಡಾ. ತೋಂಟದ ಸಿದ್ಧರಾಮ ಶ್ರೀಗಳು

ಪುಟ್ಟರಾಜ ಕವಿ ಗವಾಯಿಗಳು ಸಂಗೀತ ಲೋಕದ ಧ್ರುವತಾರೆ

> ಪುಟ್ಟರಾಜ ಕವಿ ಗವಾಯಿಗಳವರು ತ್ರಿಭಾಷಾ ಪಂಡಿತರಾಗಿ, ಬರಹಗಾರರಾಗಿ, ಆಧ್ಯಾತ್ಮ ಜೀವಿಗಳಾಗಿ, ಸಮಾಜ ಸುಧಾರಕರಾಗಿ ಸಾಕಷ್ಟು ಸ್ಮರಣೀಯ ಕಾರ್ಯಗಳನ್ನು ಮಾಡಿದ್ದಾರೆ. ಸಕಲ ವಿದ್ಯೆಗಳಲ್ಲಿ ಪ್ರಾವೀಣ್ಯರು, ಪ್ರಖ್ಯಾತರು. ನಾಡಿನಾದ್ಯಂತ ಅಪಾರ ಭಕ್ತಸಮೂಹದ ದೃಷ್ಟಿಯಲ್ಲಿ ನಡೆದಾಡುವ ದೇವರು ಎನಿಸಿದ್ದಾರೆ.
>
> **– ಡಾ. ಆರ್.ಎಸ್ ದಾನರಡ್ಡಿ.**
> ಪ್ರಾಧ್ಯಾಪಕರು, ಪಿಪಿಜಿ ಪದವಿ ಮಹಾವಿದ್ಯಾಲಯ.

■ ವಿಜಯಸಾಕ್ಷಿ ಸುದ್ದಿ, ಗದಗ

ಪುಟ್ಟರಾಜ ಕವಿ ಗವಾಯಿಗಳು ಕರ್ನಾಟಕ ಮತ್ತು ಹಿಂದೂಸ್ತಾನಿ ಎರಡೂ ಪ್ರಕಾರದ ಸಂಗೀತದಲ್ಲಿ ಅದ್ಭುತ ಪ್ರತಿಭೆಯನ್ನು ಸಾಧಿಸಿ, ಉಭಯ ಗಾನ ವಿಶಾರದ ಎಂಬ ಖ್ಯಾತಿಗೆ ಭಾಜನರಾಗಿದ್ದಾರೆ. ಪುಟ್ಟರಾಜ ಕವಿ ಗವಾಯಿಗಳು ಸಂಗೀತ ಲೋಕದ ಧ್ರುವತಾರೆ ಎಂದು ಪೂಜ್ಯ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2660ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಪುಟ್ಟರಾಜ ಕವಿ ಗವಾಯಿಗಳು ಸಂಸ್ಕೃತ, ಹಿಂದಿ, ಕನ್ನಡ ಭಾಷೆಗಳಲ್ಲಿ ಪರಿಣಿತರು. ವಾರ್ಧಕ, ಭಾಮಿನಿ ಷಟ್ಪದಿಯಲ್ಲಿ ಕಾವ್ಯ, ಪುರಾಣ ಮತ್ತು ನಾಟಕಗಳನ್ನು ರಚಿಸಿದ್ದಾರೆ. ಕನ್ನಡ ನಾಡು–ನುಡಿಗೆ ಅನೇಕ ಸಂಗೀತ ಸಾಧಕರನ್ನು ಕೊಡುಗೆಯಾಗಿ ನೀಡಿದ ಶ್ರೇಯಸ್ಸು ಅವರದ್ದು. ಸಾವಿರಾರು ಮಕ್ಕಳಿಗೆ ಅನ್ನ, ಆಶ್ರಯ ಕಲ್ಪಿಸಿ ತಮ್ಮ ಇಡೀ ಬದುಕನ್ನೇ ಅಂಧ–ಅನಾಥರ ಏಳಿಗೆಗಾಗಿ ಮುಡಿಪಾಗಿಟ್ಟಿದ್ದಾರೆ. ಕಣ್ಣಿಲ್ಲದಿದ್ದವರನ್ನು ಆತ್ಮನಿರ್ಭರರನ್ನಾಗಿ ಮಾಡಿದ್ದಾರೆ. ಸಂಗೀತ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆಗೆ, ಗೈದ ಸಾಧನೆಗೆ ಅತ್ಯುನ್ನತ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ ಎಂದು ಶ್ರೀಗಳು ಹೇಳಿದರು.

ಶ್ರೀಮಠದಲ್ಲಿ ಮೊಟ್ಟಮೊದಲಿಗೆ ಈ ಐತಿಹಾಸಿಕ ಶಿವಾನುಭವ ಕಾರ್ಯಕ್ರಮ ಪ್ರಾರಂಭಿಸಿದವರಲ್ಲಿ ಪಿ.ಎಸ್ ಸಂಶಿಮಠ ಅವರು ಪ್ರಮುಖರು. ನಮ್ಮ ಮಠದ ಅನೇಕ ಸೇವಾಕಾರ್ಯಗಳಲ್ಲಿ ನಾಗಮ್ಮ ಸಂಶಿಮಠ

ನೀರು ಪೂರೈಕೆಯಲ್ಲಿ ಯಾವುದೇ ವ್ಯತ್ಯಯ ಇಲ್ಲ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ, ಮುಂಡರಗಿ, ಶಿರಹಟ್ಟಿ ತಾಲೂಕು ವ್ಯಾಪ್ತಿಯ 212 ಜನವಸತಿಗಳಿಗೆ ಹಾಗೂ ಮುಂಡರಗಿ ಪಟ್ಟಣಕ್ಕೆ ವಿದ್ಯುತ್ ನಿಲುಗಡೆಯಿಂದಾಗಿ ಸೆಪ್ಟೆಂಬರ್ 30 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5:30ರವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುವುದು ಎಂದು ಪ್ರಕಟಣೆಯಲ್ಲಿ ಹೊರಡಿಸಲಾಗಿತ್ತು. ಆದರೆ ಸದರಿ ದಿನದಂದು ಯಾವುದೇ ತೊಂದರೆಯಿಲ್ಲದೇ ನೀರು ಪೂರೈಸಲಾಗುವುದು ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಗದಗ ಇವರು ಪ್ರಕಟಣೆಯನ್ನು ತಿಳಿಸಿರುತ್ತಾರೆ.

ಉದ್ಯಾನವನದಲ್ಲಿ ಉದಯರಾಗ, ಸಂಧ್ಯಾರಾಗ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ಉದ್ಯಾನವನದಲ್ಲಿ ಉದಯರಾಗ ಹಾಗೂ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಅಕ್ಟೋಬರ್ 1 ರಂದು ರವಿವಾರ ಬೆಳಿಗ್ಗೆ:6.30 ರಿಂದ 7.30 ರವರೆಗೆ ನಡೆಯುವ ಉದಯರಾಗ ಕಾರ್ಯಕ್ರಮದಲ್ಲಿ ರಾಜೀವಗಾಂಧಿ ನಗರದ ಶಿವಶರಣ ಹರಳಯ್ಯ ಉದ್ಯಾನವನದಲ್ಲಿ ಸಂಗಮೇಶ ಕಲಬುರ್ಗಿ ರವರಿಂದ "ವಚನ ಸಂಗೀತ" ವಿಶ್ವೇಶ್ವರಯ್ಯ ನಗರದ ವಿಶ್ವೇಶ್ವರಯ್ಯ ಉದ್ಯಾನವನದಲ್ಲಿ ಶಿವಾನಂದೀಶ್ವರ ಶಾಸ್ತ್ರೀಗಳು ಇವರಿಂದ "ಸುಗಮ ಸಂಗೀತ" ಸಾಯಂಕಾಲ: 5.30 ರಿಂದ 6.30 ಗಂಟೆಯವರೆಗೆ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದಲ್ಲಿ ನಡೆಯುವ ಸಂಧ್ಯಾರಾಗ ಕಾರ್ಯಕ್ರಮದಲ್ಲಿ ಬಿ. ದೇವರಡ್ಡಿ ಇವರಿಂದ "ಸುಗಮ ಸಂಗೀತ" ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ. 4 ರಂದು ಖೋ ಖೋ, ಥ್ರೋಬಾಲ್ ಕ್ರೀಡೆಗಳ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ

■ ವಿಜಯಸಾಕ್ಷಿ ಸುದ್ದಿ, ಗದಗ

ಬೆಂಗಳೂರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರ ಸೂಚನೆಯಂತೆ 2023-24ನೇ ಸಾಲಿನ ಬೆಳಗಾವಿ ವಿಭಾಗದಲ್ಲಿ ಖೋ ಖೋ ಮತ್ತು ಥ್ರೋ ಬಾಲ್ ಕ್ರೀಡೆಗಳಿಗೆ ಸಂಬಂಧಿಸಿದಂತೆ ವಿಭಾಗ ಮಟ್ಟದ ದಸರಾ ಕ್ರೀಡಾಕೂಟವನ್ನು ಅಕ್ಟೋಬರ್ 4 ರಂದು ಮುಂಡಗೋಡ ತಾಲೂಕು ಕ್ರೀಡಾಂಗಣದಲ್ಲಿ ಸಂಘಟಿಸಲಾಗುತ್ತಿದೆ.

ಆಯಾ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವ ಕ್ರೀಡಾಪಟುಗಳು ನಿಗದಿತ ಸ್ಥಳದಲ್ಲಿ ಅಕ್ಟೋಬರ್ 4 ರ ಬೆಳಿಗ್ಗೆ 8 ಗಂಟೆಗೆ ವರದಿ ಮಾಡಿಕೊಳ್ಳಬೇಕು. ಸ್ಪರ್ಧೆಗಳನ್ನು ಅದೇ ದಿನ ಬೆಳಿಗ್ಗೆ 9 ಗಂಟೆಗೆ ಪ್ರಾರಂಭಿಸಲಾಗುವುದು.

ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಫಲಿತಾಂಶ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಸೆಪ್ಟೆಂಬರ್ 30 ರೊಳಗೆ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರವಾರ ಉತ್ತರ ಕನ್ನಡ ಜಿಲ್ಲೆ , ಇಮೇಲ್ ವಿಳಾಸ : dvsskar@gmail.com ಗೆ ಕಳುಹಿಸಿಕೊಡಬೇಕು.

ಹೆಚ್ಚಿನ ಮಾಹಿತಿಗಾಗಿ ಹನುಮಂತ ವಡ್ಡರ, ಸಹಾಯಕ ಯುವ ಸಬಲೀಕರಣ ಮತ್ತು ಕ್ರೀಡಾಧಿಕಾರಿ ಮುಂಡಗೋಡ. ದೂ.ಸಂ. 8105464657 ಹಾಗೂ ಮಾರುತಿ ಓಂಕಾರ, ಅಧ್ಯಕ್ಷರು, ಥ್ರೋ ಬಾಲ್ ಅಸೋಸಿಯೇಷನ್, ಮುಂಡಗೋಡ ಉತ್ತರ ಕನ್ನಡ ದೂ.ಸಂ. 9743933566 ಕ್ಕೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಜಿಲ್ಲಾ ಪ್ರವಾಸ

▶▶ ಮೊದಲನೇ ಪುಟದಿಂದ

ವೇದಿಕೆಯಿಂದ ಗದಗ ಜಿಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 2 ಗಂಟೆಗೆ ಮುಳಗುಂದ ರಸ್ತೆಯಲ್ಲಿನ ಚನ್ನಮ್ಮ ಮಂಗಳ ಭವನದಲ್ಲಿ ಕಾರ್ಮಿಕ ಕಲ್ಯಾಣ ಸಂಸ್ಥೆಯ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿ ನಂತರ ಹುಬ್ಬಳ್ಳಿಯಿಂದ ವಿಮಾನದ ಮುಖಾಂತರ ಬೆಂಗಳೂರಿಗೆ ಪ್ರಯಾಣಿಸುವರು ಎಂದು ಸಚಿವರ ಕಾರ್ಯಾಲಯದ ಮೂಲಗಳು ತಿಳಿಸಿವೆ.

ಅಧಿಕಾರಿಗಳಿಗೆ ಕಾರ್ಯ ಹಂಚಿಕೆ ಆದೇಶ

▶▶ ಮೊದಲನೇ ಪುಟದಿಂದ

ಕಲ್ಯಾಣಾಧಿಕಾರಿಗಳನ್ನು, ಸದರಿ ಕಾರ್ಯಕ್ರಮಕ್ಕೆ ನಿರಂತರ ವಿದ್ಯುತ್ ವ್ಯವಸ್ಥೆ ಕಲ್ಪಿಸುವ ಕಾರ್ಯಕ್ಕಾಗಿ ಹೆಸ್ಕಾಂ ಕಾರ್ಯಪಾಲಕ ಅಭಿಯಂತರರನ್ನು ನಿಯೋಜನೆ ಮಾಡಲಾಗಿದೆ. ಕಾರ್ಯ ಹಂಚಿಕೆ ಮಾಡಲಾದ ಅಧಿಕಾರಿಗಳು ಅತ್ಯಂತ ಜವಾಬ್ದಾರಿಯುತ, ಸಮರ್ಪಕವಾಗಿ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಅವರು ಆದೇಶದಲ್ಲಿ ಸೂಚಿಸಿದ್ದಾರೆ.

ಬೆಳಗಾವಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಬೆಳಗಾವಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳಾದ ಜುಡೋ, ಬಾಕ್ಸಿಂಗ್, ಭಾರ ಎತ್ತುವುದು, ಈಜು, ಕುಸ್ತಿ, ವಾಲಿಬಾಲ್ , ಬಾಸ್ಕೆಟ್ ಬಾಲ್ ಹಾಗೂ ಕಬ್ಬಡಿ ಪಂದ್ಯಾವಳಿಗಳನ್ನು ಬೆಳಗಾವಿ ಜಿಲ್ಲೆಯಲ್ಲಿ ಅಕ್ಟೋಬರ 4 ಮತ್ತು 5 ರಂದು ಜಿಲ್ಲೆಯ ಈ ಕೆಳಕಂಡ ಸ್ಥಳಗಳಲ್ಲಿ ನಡೆಸಲಾಗುತ್ತಿದೆ.

ತಮ್ಮ ಜಿಲ್ಲೆಯ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಮತ್ತು ದ್ವಿತಿಯ ಸ್ಥಾನ ಪಡೆದವರು ಹಾಗೂ ಗುಂಪು ಸ್ಪರ್ಧೆಗಳು ಪ್ರಥಮ ಸ್ಥಾನ ಪಡೆದವರು ಭಾಗವಹಿಸಲು ಅರ್ಹರಾಗಿರುತ್ತಾರೆ.

ಅಕ್ಟೋಬರ್ 4 ರಂದು ಬೆ 9 ಗಂಟೆಗೆ ಬೆಳಗಾವಿ ಒಳಾಂಗಣ ಕ್ರೀಡಾಂಗಣ, ಕೊಲ್ಹಾಪುರ ಸರ್ಕಲ್‌ದಲ್ಲಿ ಜುಡೋ , ಕುಸ್ತಿ ಹಾಗೂ ಬಾಕ್ಸಿಂಗ್ ಕ್ರೀಡೆಗಳು ಜರುಗಲಿವೆ. ಅಕ್ಟೋಬರ್ 4ರಂದು ಬೆ 9.00 ಗಂಟೆಗೆ ಬೆಳಗಾವಿ ಜಿಲ್ಲಾ ಕ್ರೀಡಾಂಗಣದಲ್ಲಿ ಭಾರ ಎತ್ತುವ ಕ್ರೀಡೆಗಳು ಮತ್ತು ಬೆಳಗಾವಿ ಮಹಾನಗರ ಪಾಲಿಕೆ ಈಜುಕೊಳ, ಗೋವಾವೇಸ್‌ದಲ್ಲಿ ಈಜು ಸ್ಪರ್ಧೆಗಳು ಜರುಗಲಿವೆ. ಅಕ್ಟೋಬರ್ 5 ರಂದು ಬೆ 9 ಗಂಟೆಗೆ ಬೆಳಗಾವಿ ಜಿಲ್ಲಾ ಕ್ರೀಡಾಂಗಣದಲ್ಲಿ ವಾಲಿಬಾಲ್ , ಬಾಸ್ಕೆಟ್‌ಬಾಲ್, ಬೆಳಗಾವಿ ಒಳಾಂಗಣ ಕ್ರಿಡಾಂಗಣ ಕೊಲ್ಹಾಪುರದಲ್ಲಿ ಕಬಡ್ಡಿ ಕ್ರೀಡೆಗಳು ಜರುಗಲಿವೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ ಕಚೇರಿ, ದೂರವಾಣಿ ಸಂಖ್ಯೆ 0831-2950306 ನ್ನು ಸಂಪರ್ಕಿಸಬಹುದಾಗಿದ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಕಟಣೆ ತಿಳಿಸಿದೆ.

ಆರೋಗ್ಯ ಮತ್ತು ಕ್ಷೇಮ ಕೇಂದ್ರಕ್ಕೆ ಶಾಸಕ ಜಿ.ಎಸ್ ಪಾಟೀಲರಿಂದ ಭೂಮಿಪೂಜೆ

ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸೇವೆ

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸರ್ಕಾರದ ಯೋಜನೆಗಳನ್ನು ಎಲ್ಲ ವರ್ಗದ ಸಮುದಾಯಗಳಿಗೆ ತಲುಪಿಸಬೇಕು ಎಂಬ ಹಂಬಲ ಸರ್ಕಾರಕ್ಕಿರುತ್ತದೆ. ಹೀಗಾಗಿ ಗ್ರಾಮೀಣ ಪ್ರದೇಶದ ಜನರಿಗೆ ಪ್ರಾಥಮಿಕ ಹಂತದಲ್ಲಿ ಆರೋಗ್ಯ ಸೇವೆಗಳನ್ನು ನೀಡುವ ಉದ್ದೇಶದಿಂದ 60 ಲಕ್ಷ ರೂ.ಗಳ ವೆಚ್ಚದಲ್ಲಿ ಕೊಡಗಾನೂರು ಗ್ರಾಮದಲ್ಲಿ ಸುಸಜ್ಜಿತ ಕಟ್ಟಡದ ನಿರ್ಮಾಣಕ್ಕೆ ಮುಂದಾಗುವ ಮೂಲಕ ಜನರ ಮನೆಗಳಿಗೆ ಆರೋಗ್ಯ ಸೇವೆಯನ್ನು ನೀಡಲು ಸರ್ಕಾರ ದಿಟ್ಟ ಹೆಜ್ಜೆಯನ್ನಿಟ್ಟಿದೆ ಎಂದು ಶಾಸಕ ಜಿ.ಎಸ್ ಪಾಟೀಲ ನುಡಿದರು.

ಸಮೀಪದ ಕೊಡಗಾನೂರ ಗ್ರಾಮದಲ್ಲಿ ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ(15ನೇ ಹಣಕಾಸು ಯೋಜನೆ ಅಡಿಯಲ್ಲಿ) ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಭೂಮಿಪೂಜೆ ನೆರವೇರಿಸಿ, ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಿಡಗುಂದಿ ಸರ್ಕಾರಿ ಆಸ್ಪತ್ರೆಯ ಡಾ.ಚಿದಾನಂದ ಮುಂಡಾಸದ ಮಾತನಾಡಿ, ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಲಭ್ಯವಾಗುವ ಚಿಕಿತ್ಸೆ ಮತ್ತು ಅಗತ್ಯವಿದ್ದರೆ ಉನ್ನತ ಆಸ್ಪತ್ರೆಗಳಿಗೆ ಕಳುಹಿಸಿಕೊಂಡುವ ಬಗ್ಗೆ ಮಾಹಿತಿ ನೀಡಿದರು. ಡಿಎಚ್‌ಓ ಡಾ.ಎಸ್.ಎಸ್ ನೀಲಗುಂದ ಮಾತನಾಡಿದರು. ಮುಖಂಡ ಸಿದ್ದಣ್ಣ ಬಂಡಿ, ತಾಲೂಕಾ ವೈದ್ಯಾಧಿಕಾರಿ ಬಿ.ಎಸ್ ಭಜಂತ್ರಿ, ರಾಂಪೂರ ಗ್ರಾ.ಪಂ ಅಧ್ಯಕ್ಷೆ ಹುಲಿಗೆವ್ವ ಸಣ್ಣಕ್ಕಿ, ಚಂದ್ರಶೇಖರಯ್ಯ ಹಿರೇಮಠ, ಕನಕಪ್ಪ ಪೂಜಾರ, ಸದಸ್ಯರಾದ ಅಕ್ಕಮಹಾದೇವಿ ವಾಲ್ಮೀಕಿ, ಶೇಖವ್ವ ಅಬ್ಬಿಗೇರಿ, ಮಾರುತ್ತೆಪ್ಪ ಜಿಗೇರಿ, ನಾಗಯ್ಯ ಹಿರೇಮಠ, ಹನಮಂತ ರಾಮಜಿ, ಬಾಲಚಂದ್ರ ವಾಲ್ಮೀಕಿ, ವಿಜಯ ಜಾಧವ, ಚನ್ನಬಸಪ್ಪ ಹಡಪದ, ರಾಚಯ್ಯ ಬಾಳಿಕಾಯಿಮಠ, ಚನ್ನವೀರಯ್ಯ ಪೂಜಾರ, ಕಮಲಪ್ಪ ಮಾಳೊತ್ತರ, ಕುಮಾರ ರಾಠೋಡ, ಮುತ್ತಪ್ಪ ಮಾಳೊತ್ತರ, ಪಿಡಿಓ ಎಸ್.ಎಸ್ ಕಡಬಲಕಟ್ಟಿ ಮುಂತಾದವರಿದ್ದರು.

> ರಾಜ್ಯ ವಿಧಾನಸಭಾ ಚುನಾವಣಾ ಪೂರ್ವದಲ್ಲಿ ರಾಜ್ಯದ ಜನತೆಗೆ ನೀಡಿದ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರವು ನುಡಿದಂತೆ ನಡೆಯುತ್ತಿದೆ. ಆದರೆ ಲೋಕಸಭಾ ಚುನಾವಣಾ ಪೂರ್ವದಲ್ಲಿ ನೀಡಿದ ಘೋಷಣೆಗಳು ಕೇವಲ ಘೋಷಣೆಗಳಾಗಿ ಉಳಿದಿವೆ ಎಂದು ಜನಸಾಮಾನ್ಯರು ದೂರುತ್ತಿದ್ದು, ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ಸರ್ಕಾರ ರಚನೆಯಾಗಲಿದೆ.
>
> – ಜಿ.ಎಸ್ ಪಾಟೀಲ.
> ಶಾಸಕರು, ರೋಣ.

ಕಾವೇರಿ ನೀರು ಬಿಟ್ಟರೆ ಉಗ್ರ ಹೋರಾಟ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವುದನ್ನು ಖಂಡಿಸಿ ಶುಕ್ರವಾರ ಪಟ್ಟಣದ ರೈತ ಸಂಘಟನೆಗಳಿಂದ ಇಲ್ಲಿನ ಬಾಲಲೀಲಾ ಮಾಹಾಂತ ಶಿವಯೋಗಿಗಳ ಗವಿಮಠದಿಂದ ಪಾದಯಾತ್ರೆಯ ಮೂಲಕ ತೆರಳಿ, ಪ.ಪಂ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ಸದಸ್ಯ ಕಿರಣ ಕುಲಕರ್ಣಿ ಮಾತನಾಡಿ, ಮಳೆ ಕೊರತೆಯಿಂದ ರಾಜ್ಯ ತತ್ತರಿಸಿ ಹೋಗಿದ್ದು, ರಾಜ್ಯದ ರೈತರ ಹಿತದೃಷ್ಟಿಯಿಂದ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಬಾರದು ಎಂದು ಒತ್ತಾಯಿಸಿದರು.

ಕರವೇ ಉಪಾಧ್ಯಕ್ಷ ದಾವುದ ಜಮಾಲ ಮಾತನಾಡಿ, ಕೂಡಲೇ ರಾಜ್ಯದ ಸಂಸದರು, ಮುಖ್ಯಮಂತ್ರಿಗಳು ಪ್ರಧಾನಮಂತ್ರಿಯವರನ್ನು ಭೇಟಿಯಾಗಿ, ಕಾವೇರಿ ನೀರು ಬಿಡದಂತೆ ಮನವಿ ಮಾಡಬೇಕು. ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯದ ಜಲ, ನೆಲ, ಭಾಷೆಯ ವಿಷಯದಲ್ಲಿ ಯಾವಾಗಲೂ ಹೋರಾಟ ಮಾಡುತ್ತಾ ಬಂದಿದ್ದು, ಕಾವೇರಿ ನೀರನ್ನು ಇನ್ನು ಮುಂದೆಯೂ ತಮಿಳುನಾಡಿಗೆ ಬಿಟ್ಟರೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಪ.ಪಂ ಮುಖ್ಯಾಧಿಕಾರಿ ಮಂಜುನಾಥ ಗುಳೆದ, ರೈತ ಸಂಘದ ಅಧ್ಯಕ್ಷ ಬಸವರಾಜ ಕರಿಗಾರ, ಗುಡುಸಾಬ ಗಾಡಿ, ಕರವೇ ಅಧ್ಯಕ್ಷ ಎಂ.ಆರ್ ತಡೆದಮಠ, ಅಲ್ಲಾಭಕ್ಷಿ ಹೊಂಬಳ, ದೇವಪ್ಪ ಅಣ್ಣಿಗೇರಿ, ಮುತ್ತಪ್ಪ ಪಲ್ಲೇದ, ದೇವರಾಜ ಸಂಗನಪೇಟಿ ಸೇರಿದಂತೆ ರೈತ ಬಾಂದವರು, ಕರವೇ ಘಟಕದ ಸರ್ವ ಸದಸ್ಯರು ಇದ್ದರು.

ಇಂದು ನಡೆಯಲಿರುವ ಜನತಾ ದರ್ಶನ ಕಾರ್ಯಕ್ರಮಕ್ಕೆ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಸಜ್ಜಾಗಿರುವ ವೇದಿಕೆ.

ಸಂತೆಕರ ಲಿಲಾವು

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಸಂತೆ ಕರ ಹರಾಜನ್ನು ಅಕ್ಟೋಬರ್ 6 ರಂದು ಮುಂಜಾನೆ 11.30 ಘಂಟೆಗೆ ನರಗುಂದ ಪುರಸಭೆ ಸಭಾಭವನದಲ್ಲಿ ಕರೆಯಲಾಗಿದೆ.

ಲಿಲಾವಿನಲ್ಲಿ ಭಾಗವಹಿಸುವವರು ರೂ.50000/- ಗಳನ್ನು ಮುಂಗಡ ಠೇವಣಿ ಅಂತಾ ಲಿಲಾವಿನ ದಿನಾಂಕದಂದು ಮುಂಜಾನೆ 11.00 ಗಂಟೆಯ ಒಳಗಾಗಿ ಪುರಸಭೆಗೆ ಭರಣಾ ಮಾಡಿ ಲಿಲಾವಿನಲ್ಲಿ ಭಾಗವಹಿಸತಕ್ಕದ್ದು. ಲಿಲಾವಿನ ಷರತ್ತುಗಳನ್ನು ಲಿಲಾವು ಕಾಲಕ್ಕೆ ಓದಿ ಹೇಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ನರಗುಂದ ಪುರಸಭೆಯ ಕಂದಾಯ ವಿಭಾಗದ ಅಧಿಕಾರಿಗಳನ್ನು ಅಥವಾ ದೂರವಾಣಿ ಸಂಖ್ಯೆ 08377-244227/244226 ಸಂಪರ್ಕಿಸಬಹುದಾಗಿದೆ.

ಪ್ರತಿಯೊಬ್ಬರೂ ಪರಿಸರ ಸ್ವಚ್ಛತೆಗೆ ಶ್ರಮಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ವಚ್ಛತೆಯಿಂದ ಆರೋಗ್ಯ ವೃದ್ಧಿಯಾಗುತ್ತದೆ. ಗ್ರಾಮದ ಪ್ರತಿಯೊಬ್ಬ ವ್ಯಕ್ತಿಯೂ ಶೌಚಾಲಯ ಬಳಕೆ, ತ್ಯಾಜ್ಯ ವಿಲೇವಾರಿ ವಾಹನಕ್ಕೆ ತ್ಯಾಜ್ಯ ವಿಂಗಡಣೆ ಮಾಡಿ ಹಾಕುವ ಮೂಲಕ ನಮ್ಮ ಮನೆಯ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಎಂದು ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ಹೇಳಿದರು.

ಅವರು ಸಮಿಪದ ತಿಮ್ಮಾಪೂರ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ 'ಸ್ವಚ್ಛ ಭಾರತ್ ಮಿಷನ್' ಯೋಜನೆಯಡಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಶ್ರೀ ಬೀರಲಿಂಗೇಶ್ವರ ಯುವಕ ಸಂಘದ ವತಿಯಿಂದ ನಡೆದ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮದಲ್ಲಿ ಸ್ವಚ್ಛತಾ ಪ್ರತಿಜ್ಞೆ ಬೋಧಿಸಿ ಮಾತನಾಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಹಾಯಕಿ ಗಂಗಮ್ಮ ಕುಂಬಾರ ಮಾತನಾಡಿ, ಗ್ರಾಮದಲ್ಲಿ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಶುದ್ಧವಾದ ನೀರನ್ನು ಕುಡಿಯಬೇಕು, ಆಹಾರ ಪದಾರ್ಥಗಳನ್ನು ಸ್ವಚ್ಛವಾದ ನೀರಿನಲ್ಲಿ ತೊಳೆದು ಬೇಯಿಸಿ ಸೇವಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬೀರಲಿಂಗೇಶ್ವರ ಯುವಕ ಸಂಘದ ಅಧ್ಯಕ್ಷ ರಾಮಪ್ಪ ಹೊಸಮನಿ, ಸುರೇಶ ಆಲೂರು, ರಮೇಶ ಬನಾಪೂರ, ಹನುಮಪ್ಪ ಬಿಚಗಲ್ಲ, ಮಾರುತಿ ಕಟಗಿ ಶಿವಾನಂದ ಡಂಬಳ, ಸುಶ್ಮಿತಾ ಪೀಟರ್, ಆಶಾ ಕಾರ್ಯಕರ್ತೆಯರಾದ ವಿಜಯಲಕ್ಷ್ಮೀ ಉಂಡಿ, ಶಾರದಾ ಗೋದಿ ಪಾಲ್ಗೊಂಡಿದ್ದರು.

ಮದ್ಯ ಸಾಗಾಟ, ಮಾರಾಟ ನಿಷೇಧ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಾದ್ಯಂತ ಶ್ರೀ ಗಣೇಶ ಹಬ್ಬವನ್ನು ಆಚರಿಸಲಾಗುತ್ತಿದ್ದು, ಗದಗ ಬೆಟಗೇರಿ ಅವಳಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಹಬ್ಬದ ನಿಮಿತ್ತ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಸಂಬಂಧ ಜಿಲ್ಲೆಯಾದ್ಯಂತ ಗಣೇಶ ಮೂರ್ತಿಗಳನ್ನು ಆಯಾ ಸಂಘಟಿಕರು/ ಸಾರ್ವಜನಿಕರು ಮೆರವಣಿಗೆ ಮೂಲಕ ಸ್ಥಳೀಯ ಆಡಳಿತ ನಿಗದಿಪಡಿಸಿದ ಸ್ಥಳದಲ್ಲಿ ವಿಸರ್ಜನೆ ಕಾರ್ಯಕ್ರಮಗಳು ಜರುಗುತ್ತವೆ. ಸದರಿ ದಿನಾಂಕಗಳಂದು ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮದ್ಯ ಸಾಗಾಟ ಮತ್ತು ಮದ್ಯ ಮಾರಾಟವನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿತ್ತು.

ಸೆಪ್ಟೆಂಬರ್ 28ರ ಮದ್ಯರಾತ್ರಿಯಿಂದ ಸೆಪ್ಟೆಂಬರ್ 30ರ ಬೆಳಗಿನ 6 ಗಂಟೆಯವರೆಗೆ ಗದಗ ಶಹರ, ಬೆಟಗೇರಿ ಮತ್ತು ಬೆಟಗೇರಿ ಬಡಾವಣೆ ಠಾಣೆ ಮತ್ತು ಗದಗ ತಾಲೂಕಾ

ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ವಿಕಲಚೇತನರಿಗಾಗಿ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನ ಯೋಜನೆಯನ್ನು 2023-24ನೇ ಸಾಲಿನಿಂದ ಸ್ಟೇಟ್ ಸ್ಕಾಲರ್‌ಶಿಪ್ಪ್ ಪೋರ್ಟಲ್‌ನಲ್ಲಿ ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2023-24ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಪ್ರಿ ಮೆಟ್ರಿಕ್ ವ್ಯಾಸಂಗ ಮಾಡುತ್ತಿರುವ ವಿಕಲಚೇತನ ವಿಧ್ಯಾರ್ಥಿಗಳು ವಿದ್ಯಾರ್ಥಿ ವೇತನದ ಅರ್ಜಿಗಳನ್ನು ಸ್ಟೇಟ್ ಸ್ಕಾಲರ್‌ಶಿಪ್ ಪೋರ್ಟಲ್ https://ssp.karnataka.gov.in/ssp2324/homenews.aspx ನಲ್ಲಿ ಹೊಸ ಅರ್ಜಿ ಹಾಗೂ https://ssp.karnataka.gov.in/ssp2324/signin.aspx ನಲ್ಲಿ ನವೀಕರಣ ಅರ್ಜಿಯನ್ನು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ತಮ್ಮ ವ್ಯಾಪ್ತಿಗೊಳಪಡುವ ಗ್ರಾ.ಪಂ ವಿ.ಆರ್. ಡಬ್ಲ್ಯು , ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತಿ ಯುಆರ್ ಡಬ್ಲ್ಯು, ತಾ.ಪಂ. ಎಂ.ಆರ್. ಡಬ್ಲ್ಯು ಇವರಲ್ಲಿ ಅರ್ಜಿ ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ಎಂ.ಆರ್.ಡಬ್ಲ್ಯು ಖಾಜಾಹುಸೇನ ಕಾತರಕಿ, ತಾಲೂಕು ಪಂಚಾಯತ, ಗದಗ - 8867556465, ಬಸವರಾಜ. ಓಲಿ. ತಾಲೂಕು ಪಂಚಾಯತ, ರೋಣ - 9741615926, ಶಶಿಕಲಾ. ವಡ್ಡಟ್ಟಿ. ತಾಲೂಕು ಪಂಚಾಯತ, ಮುಂಡರಗಿ - 9611922445, ಭಾರತಿ ಮುರಶಿಳ್ಳಿ. ತಾಲೂಕು ಪಂಚಾಯತ, ಶಿರಹಟ್ಟಿ - 8951128679, ಶಿವಾನಂದ ಹಾದಿಮನಿ, ತಾಲೂಕು ಪಂಚಾಯತ, ನರಗುಂದ - 9591679022 ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಗದಗ ಜಿಲ್ಲಾಡಳಿತ ಭವನ, ರೂಮ್ ನಂ:29ರಲ್ಲಿನ ದೂರವಾಣಿ ಸಂಖ್ಯೆ 08372-220419 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೆ ಮಹಾಂತೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ತೊರೆದು ಅ.10ರಂದು ಡಿ.ಕೆ ಶಿವಕುಮಾರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆ

ರಾಮಣ್ಣ ಲಮಾಣಿ ಕಾಂಗ್ರೆಸ್ ಸೇರುವುದು ಪಕ್ಕಾ!

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಶಿರಹಟ್ಟಿಯ ಬಿಜೆಪಿ ಮಾಜಿ ಶಾಸಕ ರಾಮಣ್ಣ ಲಮಾಣಿ ಕಾಂಗ್ರೆಸ್ ಸೇರ್ಪಡೆಯಾಗಲಿರುವುದು ಬಹುತೇಕ ಖಚಿತವಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ಬುಧವಾರ ಮಾಜಿ ಸಿಎಂ ಜಗದೀಶ ಶೆಟ್ಟರ ಅವರೊಡಗೂಡಿ ಡಿಸಿಎಂ ಡಿ.ಕೆ ಶಿವಕುಮಾರ ಅವರನ್ನು ಭೇಟಿಯಾಗಿ ಮಾತುಕಥೆ ನಡೆಸಿದ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

ಈ ಕುರಿತು ಮಾತನಾಡಿದ ರಾಮಣ್ಣ ಲಮಾಣಿ ಅವರು, ನನ್ನ ರಾಜಕೀಯ ಮಾರ್ಗದರ್ಶಕರಾದ ಮಾಜಿ ಸಿಎಂ ಜಗದೀಶ ಶೆಟ್ಟರ ಅವರೊಂದಿಗೆ ಡಿ.ಕೆ ಶಿವಕುಮಾರ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದೇನೆ. ಅವರು ನನ್ನನ್ನು ಆತ್ಮೀಯವಾಗಿ ಪಕ್ಷಕ್ಕೆ ಸ್ವಾಗತಿಸಿದ್ದಾರೆ. ನನ್ನ ಕ್ಷೇತ್ರದಲ್ಲಿನ ಅನೇಕ ಮುಖಂಡರು, ಕಾರ್ಯಕರ್ತರು, ಅಪಾರ ಬೆಂಬಲಿಗರೊಂದಿಗೆ ಅ.10ರಂದು ಬೆಂಗಳೂರಿನ ಪಕ್ಷದ ಕಾರ್ಯಾಲಯದಲ್ಲಿ ಡಿ.ಕೆ ಶಿವಕುಮಾರ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷ ಸೇರುವೆ ಎಂದು ಸ್ಪಷ್ಟಪಡಿಸಿದರು. ಬಿ.ಎಸ್ ಯಡಿಯೂರಪ್ಪ, ಸದಾನಂದಗೌಡ ಮತ್ತು ಜಗದೀಶ ಶೆಟ್ಟರ ಸಿಎಂ ಆಗಿದ್ದ ವೇಳೆ ಪಕ್ಷದಲ್ಲಿ ಟಿಕೆಟ್ ಹಂಚಿಕೆಯಲ್ಲಿ ಹಣಕಾಸಿನ ವ್ಯವಹಾರ ಇರಲಿಲ್ಲ. ಆದರೆ ಬೊಮ್ಮಾಯಿ ಅವಧಿಯಲ್ಲಿ ನನ್ನಂತಹ ಪಕ್ಷನಿಷ್ಠರಿಗೆ ಬೆಲೆಯೇ ಇಲ್ಲದಂತಾಗಿ ದುಡ್ಡಿಗೆ ಟಿಕೆಟ್ ಮಾರಿಕೊಳ್ಳುತ್ತಿದ್ದಾರೆ. ಬೊಮ್ಮಾಯಿ ಸೇರಿ ಹಲವರ ಷಡ್ಯಂತ್ರದಿಂದ ಟಿಕೆಟ್ ವಂಚಿತನಾಗಿದ್ದೇನೆ. ಈಗಿರುವ ಶಾಸಕ ಚಂದ್ರು ಲಮಾಣಿ ಅವರು ಮನೆಗೆ ಬಂದು ನನ್ನ ಗೆಲುವಿಗೆ ಸಹಕರಿಸಿ ಎಂದು ಕಾಲು ಹಿಡಿದು ಬೇಡಿಕೊಂಡರು. ಅಲ್ಲದೇ ಬಹಿರಂಗ ಪ್ರಚಾರ ಸಭೆಯಲ್ಲಿ ಅಮಿತ್‌ಶಾ ಅವರ ಸಮ್ಮುಖದಲ್ಲೇ ನನ್ನ ಕಾಲು ಮುಗಿದದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ನನ್ನ ಸಹಾಯದಿಂದ ಗೆಲುವು ಸಾಧಿಸಿದ ಬಳಿಕ ಒಮ್ಮೆಯೂ ನನ್ನನ್ನು ಸೇರಿ ಯಾವ ಮುಖಂಡರು, ಕಾರ್ಯಕರ್ತರನ್ನೂ ತಿರುಗಿಯೂ ನೋಡಿಲ್ಲ. ಸಂಪರ್ಕವೂ ಇಲ್ಲ. ಬಿಜೆಪಿಯ ಬಲವರ್ಧನೆಗಾಗಿ ಸಮರ್ಪಿಸಿಕೊಂಡ ನನ್ನಂತವನಿಗೇ ಇಲ್ಲಿ ನಯಾಪೈಸೆ ಕಿಮ್ಮತ್ತಿಲ್ಲದಂತಾಗಿದೆ. ರಾಮಣ್ಣನ ಬಗ್ಗೆ ಕ್ಷೇತ್ರದುದ್ದಕ್ಕೂ ಎಲ್ಲರಿಗೂ ಸಾಕಷ್ಟು ಅನುಕಂಪವಿದೆ. ಯಾವುದೇ ಷರತ್ತುಗಳಿಲ್ಲದೇ ಕಾಂಗ್ರೆಸ್ ಪಕ್ಷ ಸೇರುತ್ತಿದ್ದು, ಬರುವ ಲೋಕಸಭೆ, ಜಿ.ಪಂ, ತಾ.ಪಂ ಎಲ್ಲ ಚುನಾವಣೆಯಲ್ಲೂ ನನ್ನ ಶಕ್ತಿ ತೋರಿಸುವ ಮೂಲಕ ಪಕ್ಷದ ಗೆಲುವು, ಬಲವರ್ಧನೆಗೆ ಶ್ರಮಿಸುತ್ತೇನೆ. ಬರುವ ದಿನಗಳಲ್ಲಿ ಡಿ.ಕೆ ಶಿವಕುಮಾರ ಅವರು ಸಿಎಂ ಆಗಲಿದ್ದು, ತಮಗೆ ಉತ್ತಮ ಅವಕಾಶ ನೀಡಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

2005-06ರಲ್ಲಿ ಗದಗ ಜಿ.ಪಂ.ನ ಒಟ್ಟು 17 ಕ್ಷೇತ್ರಗಳಲ್ಲಿ ಬಿಜೆಪಿಯ ಏಕೈಕ ಸದಸ್ಯರಾಗಿ ಆಯ್ಕೆಯಾದರು. ಮುಂದೆ ಇವರ ಸಂಘಟನಾ ಶಕ್ತಿಯಿಂದ 2008ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. ಗ್ರಾ.ಪಂ, ತಾ.ಪಂ, ಜಿ.ಪಂ, ವಿಧಾನಸಭೆ ಚುನಾವಣೆಯಲ್ಲಿ ತಮ್ಮ ನೇತೃತ್ವದಲ್ಲಿ ಇಡೀ ಶಿರಹಟ್ಟಿ ಮತಕ್ಷೇತ್ರದಲ್ಲಿ ಹೆಚ್ಚಿನ ಅಂತರದಲ್ಲಿ ಗೆಲುವು ಸಾಧಿಸಲು ಕಾರಣರಾಗಿ ಪಕ್ಷದ ಬಲವರ್ಧನೆ ಮಾಡಿದರು. ಮುಂದೆ 2013ರಲ್ಲಿ ಪಕ್ಷದ ನಾಯಕರಲ್ಲಿನ ಭಿನ್ನಾಭಿಪ್ರಾಯದಿಂದ ಕೇವಲ 315 ಮತಗಳ ಅಂತರದಿಂದ ಸೋಲುವಂತಾಯಿತು. ಬಳಿಕ 5 ವರ್ಷಗಳ ಕಾಲ ನಿರಂತರ ಕ್ಷೇತ್ರ ಸುತ್ತುವ, ಜನರ ಕಷ್ಟಗಳಿಗೆ ಸ್ಪಂದಿಸುವ ಮೂಲಕ 2018ರಲ್ಲಿ 30 ಸಾವಿರ ಮತಗಳ ಅಂತರದಲ್ಲಿ ಗೆದ್ದು, ರಾಜ್ಯ ರಾಜಕಾರಣದಲ್ಲಿ ಗಮನ ಸೆಳೆದಿದ್ದರು. 2023ರಲ್ಲಿ ಚುನಾವಣೆಯಲ್ಲಿ ಕೊನೆ ಕ್ಷಣದವರೆಗೂ ರಾಮಣ್ಣನಿಗೆ ಟಿಕೆಟ್ ಪಕ್ಕಾ ಎನ್ನಲಾಗಿತ್ತು. ಈ ಭರವಸೆಯ ಹಿನ್ನೆಲೆಯಲ್ಲಿಯೇ ಅವರು ಬೇರೆ ಪಕ್ಷದವರ ಆಹ್ವಾನ ತಿರಸ್ಕರಿಸಿ ಕೊನೆಗೆ ಟಿಕೆಟ್ ವಂಚಿತರಾಗಿದ್ದರು.

ರಾಮಣ್ಣ ಲಮಾಣಿ ಶಿರಹಟ್ಟಿ ಮತಕ್ಷೇತ್ರವಷ್ಟೇ ಅಲ್ಲದೆ, ಗದಗ ಜಿಲ್ಲೆಯಲ್ಲಿಯೇ ಬಿಜೆಪಿಯ ಗೆಲುವಿಗೆ ಶ್ರಮಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಬಿಜೆಪಿ ಪಕ್ಷ ನಂಬಿಸಿ ಮೋಸ ಮಾಡಿರುವುದು, ಸದ್ಯ ಅವರನ್ನು ಪಕ್ಷ ನಡೆಸಿಕೊಳ್ಳುತ್ತಿರುವ ರೀತಿ ಬೇಸರ ತರಿಸಿದೆ. ರಾಮಣ್ಣ ಸೇರಿ ಅನೇಕ ಬಿಜೆಪಿ ಮಾಜಿ ಶಾಸಕರು, ನಾಯಕರು ಯಾವುದೇ ಷರತ್ತಿಲ್ಲದೇ ಸ್ವಯಂ ಪ್ರೇರಣೆಯಿಂದ ಅಧಿಕೃತವಾಗಿ ಕಾಂಗ್ರೆಸ್ ಸೇರಲಿದ್ದಾರೆ. ಈ ಕುರಿತು ನನ್ನ ಜೊತೆ ನಿರಂತರ ಸಂಪರ್ಕದಲ್ಲಿದ್ದಾರೆ.

– ಜಗದೀಶ ಶೆಟ್ಟರ, ಮಾಜಿ ಸಿಎಂ.

ಪ್ರಧಾನಿ ಮಧ್ಯ ಪ್ರವೇಶಕ್ಕೆ ಇದು ಸಕಾಲ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಬಹುವರ್ಷಗಳ ಕಾವೇರಿ ನೀರಿನ ವಿವಾದ ಇದೀಗ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ಎರಡು ರಾಜ್ಯಗಳ ಮಂತ್ರಿಗಳು, ಮುಖ್ಯಮಂತ್ರಿಗಳನ್ನು ನೀರಾವರಿ ತಜ್ಞರನ್ನು, ಹೋರಾಟಗಾರರನ್ನು ಸೇರಿಸಿ ಮಾತುಕತೆ ಮೂಲಕ ಇತ್ಯರ್ಥಪಡಿಸಲು ಕೂಡಲೇ ಪ್ರಧಾನಮಂತ್ರಿಗಳು ಮಧ್ಯಪ್ರವೇಶಿಸಿ, ಸಮಸ್ಯೆ ಪರಿಹರಿಸಬೇಕು ಎಂದು ಪಕ್ಷಾತೀತ ರೈತ ಪರ ಹೋರಾಟ ವೇದಿಕೆ ಅಧ್ಯಕ್ಷ ಮಹೇಶ ಹೊಗೆಸೊಪ್ಪಿನ ಮತ್ತು ಕೃಷಿಕ ಸಮಾಜದ ಅಧ್ಯಕ್ಷ ಚನ್ನಪ್ಪ ಷಣ್ಮುಖಿ ಆಗ್ರಹಿಸಿದರು.

ಅವರು ಶುಕ್ರವಾರ ವಿವಿಧ ಸಂಘಟನೆಗಳು ರಾಜ್ಯದಲ್ಲಿ ಕರೆದಿದ್ದ ಬಂದ್‌ಗೆ ನೈತಿಕ ಬೆಂಬಲಾರ್ಥವಾಗಿ ಮತ್ತು ಕೇಂದ್ರ ಸರ್ಕಾರದ ಗಮನ ಸೆಳೆಯಲು ಅಂಚೆ ಕಚೇರಿ ಎದುರು ಎತ್ತುಗಳೊಂದಿಗೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ಕಾವೇರಿ ನೀರಿನ ವಿವಾದವನ್ನು ಬಗೆಹರಿಸುವ ನಿಟ್ಟಿನಲ್ಲಿ ಯಾವುದೇ ಸರ್ಕಾರಗಳು ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಎಲ್ಲರೂ ರಾಜಕೀಯ ಬೇಳೆ ಬೆಯಿಸಿಕೊಳ್ಳುವ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿದರಲ್ಲದೆ, ಕಾವೇರಿ ನೀರಿಗಾಗಿ ಕರ್ನಾಟಕದ ಜನತೆ ಹೋರಾಟಕ್ಕಿಳಿಯಲಿದ್ದಾರೆ ಎಂದರು.

ತಹಸೀಲ್ದಾರ ಕಚೇರಿ ಸಿಬ್ಬಂದಿಗಳು ಮನವಿ ಸ್ವೀಕರಿಸಿದರು. ಹಿರಿಯ ಮುಖಂಡ ಶಂಕ್ರಪ್ಪ ಮ್ಯಾಗೇರಿ, ಶಿವಾನಂದ ಲಿಂಗಶೆಟ್ಟಿ, ಅಮರೇಶ ತೆಂಬದಮನಿ, ದ್ಯಾಮಣ್ಣ ಕಮತದ, ಅಲ್ಲಿಸಾಬ ಕನಕವಾಡ, ಖಾನಸಾಬ ಸೂರಣಗಿ ಸೇರಿದಂತೆ ಅನೇಕರಿದ್ದರು.

ಕೇಂದ್ರ ಸರ್ಕಾರ ಕಾವೇರಿ ಸಮಸ್ಯೆ ಬಗೆಹರಿಸಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ವಿವಿಧ ಸಂಘಟನೆಗಳು ಕರೆನೀಡಿದ್ದ ಕರ್ನಾಟಕ ಬಂದ್ ಬೆಂಬಲಿಸಿ, ಕರವೇ ವತಿಯಿಂದ ಪ್ರತಿಭಟನೆ ನಡೆಸಲಾಯಿತು. ಕರವೇ ಜಿಲ್ಲಾಧ್ಯಕ್ಷ ದಾವಲ ಸಾಬ್ ಮುಳುಗುಂದ ಮಾತನಾಡಿ, ಕಾವೇರಿ ನದಿಯ ನೀರು ಹಂಚಿಕೆ ವಿಷಯದಲ್ಲಿ ನಮ್ಮ ರಾಜ್ಯಕ್ಕೆ ಹಾಗೂ ರೈತರಿಗೆ ಅನ್ಯಾಯವಾಗುತ್ತಿದೆ. ಶೀಘ್ರವೇ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ, ಸಮಸ್ಯೆಯನ್ನು ಬಗೆಹರಿಸಬೇಕೆಂದು ಆಗ್ರಹಿಸಿದರು.

ಕರವೇ ಶಿರಹಟ್ಟಿ ತಾಲೂಕಾಧ್ಯಕ್ಷ ರಫೀಕ ಕೇರಿಮನಿ ಮಾತನಾಡಿ, ರಾಜ್ಯದಲ್ಲಿ ಬರ ತಾಂಡವವಾಡುತ್ತಿದ್ದು, ನಮಗೇ ನೀರಿಲ್ಲದ ಸಂದರ್ಭದಲ್ಲಿ ತಮಿಳುನಾಡಿಗೆ ಕಾವೇರಿಯಿಂದ ನೀರು ಬಿಡುತ್ತಿರುವುದು ರಾಜ್ಯದ ಜನರಿಗೆ ಮಾಡುತ್ತಿರುವ ಅನ್ಯಾಯ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಕಾರ್ಯಾಧ್ಯಕ್ಷ ವೆಂಕಟೇಶ್ ಬೇಲೂರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಭಂಡಾರಿ, ಜಿಲ್ಲಾ ಕಾರ್ಯದರ್ಶಿ ಸಹದೇವ್ ಕೋಟಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ತಿಪ್ಪಣ್ಣ ಕುಂಚಗೇರಿ, ಜಿಲ್ಲಾ ಯುವ ಘಟಕಾಧ್ಯಕ್ಷ ಮಣಿಕಂಠ ಭಂಡಾರಿ, ಶಿರಹಟ್ಟಿ ಕಾರ್ಯಾಧ್ಯಕ್ಷ ಗೌಸ್ ಕಲಾವಂತ್, ಗದಗ ತಾಲೂಕಾಧ್ಯಕ್ಷ ಪರಶುರಾಮ್ ಬಂಕದಮನಿ, ಮುಂಡರಗಿ ತಾಲೂಕಾಧ್ಯಕ್ಷ ಸಿದ್ದಪ್ಪ ಮುದ್ಲಾಪುರ್ ಹಾಗೂ ಕರವೇ ಕಾರ್ಯಕರ್ತರು ಹಾಜರಿದ್ದರು.

ಕಾವೇರಿ ನೀರು ನಿರ್ವಹಣಾ ಮಂಡಳಿ ಹಾಗೂ ಸುಪ್ರೀಂಕೋರ್ಟ್ ಮುಂದೆ ನಾಳೆಯೇ ನಮ್ಮ ಬಳಿ ನೀರು ಇಲ್ಲ, ನೀರು ಬಿಡಲು ಸಾಧ್ಯವಿಲ್ಲ ಎಂದು ಮರುಪರಿಶೀಲನಾ ಅರ್ಜಿ ಹಾಕಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಿಧನ ವಾರ್ತೆ

ಸುನಂದಾ ಬಸಪ್ಪಟ್ಟಿ ವಾಲಿ

ಗದಗ: ನಗರದ ಕೆ.ಸಿ ರಾಣಿ ರಸ್ತೆ, ಸಂಜೀವಿನಿ ಆಸ್ಪತ್ರೆ ಬಳಿಯ ನಿವಾಸಿ ಶ್ರೀಮತಿ ಸುನಂದಾ ಬಸಪ್ಪಟ್ಟಿ ವಾಲಿ(67) ಶುಕ್ರವಾರ ನಿಧನರಾದರು. ಮೃತರು ಪತಿ, ಪುತ್ರ, ಪುತ್ರಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದು, ಮೃತರ ಅಂತಿಮ ಯಾತ್ರೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವಗೃಹದಿಂದ ಹೊರಡಲಿದೆ.

ಪುಷ್ಪಾವತಿ ದೇಶಪಾಂಡೆ

ಗದಗ: ಬ್ರಾಹ್ಮಣ ಸಮಾಜದ ಹಿರಿಯ ಧುರೀಣ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಸ್ವಯಂಸೇವಕರಾಗಿದ್ದ ದಿ.ಕೃಷ್ಣರಾವ ದೇಶಪಾಂಡೆ ಅವರ ಪತ್ನಿ ಪುಷ್ಪಾವತಿ ಕೃಷ್ಣರಾವ ದೇಶಪಾಂಡೆ(87) ಶುಕ್ರವಾರ ನಿಧನರಾದರು.

ದಿವಂಗತರು ಹಿರಿಯ ನ್ಯಾಯವಾದಿ ಡಿ.ಕೆ ದೇಶಪಾಂಡೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನಿ ಡಾ.ವಿವೇಕಾನಂದ ದೇಶಪಾಂಡೆ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ, ಅಪಾರ ಬಂಧುಗಳನ್ನು ಅಗಲಿದ್ದಾರೆ.

ಸಂತಾಪ: ಪುಷ್ಪಾವತಿ ಕೃಷ್ಣರಾವ ದೇಶಪಾಂಡೆ ನಿಧನಕ್ಕೆ ಸಚಿವ ಡಾ. ಎಚ್.ಕೆ ಪಾಟೀಲ, ಶಾಸಕರುಗಳಾದ ಜಿ.ಎಸ್ ಪಾಟೀಲ, ಸಿ.ಸಿ ಪಾಟೀಲ, ಡಾ.ಚಂದ್ರು ಲಮಾಣಿ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಗುರುರಾಜ ಬಳಗಾನೂರ, ಪಂ.ರಾಜಗೋಪಾಲಾಚಾರ್ಯ ಮಳಗಿ, ಶ್ರೀನಿವಾಸ ಹುಯಿಲಗೋಳ, ಮೃತ್ಯುಂಜಯ ಸಂಕೇಶ್ವರ ಮುಂತಾದವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಕರವೇ ಪ್ರವೀಣ ಶೆಟ್ಟಿ ಬಣದಿಂದ ಪ್ರತಿಭಟನೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ತಕ್ಷಣವೇ ನಿಲ್ಲಿಸಬೇಕು. ಇಲ್ಲವಾದರೆ ರಾಜ್ಯಾದ್ಯಂತ ತೀವ್ರವಾದ ಪ್ರತಿಭಟನೆ ನಡೆಸುತ್ತೇವೆ ಎಂದು ಕರವೇ ಪ್ರವೀಣ ಶೆಟ್ಟಿ ಬಣದ ತಾಲೂಕಾಧ್ಯಕ್ಷ ಮಹೇಶ ಕಲಘಟಗಿ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ(ಪ್ರವೀಣ ಶೆಟ್ಟಿ ಬಣ) ಯವರು ಶಿಗ್ಲಿ ನಾಕಾ ಬಳಿ ಸೇರಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಕಾವೇರಿ ವಿಷಯವಾಗಿ ಸಂಸದರು ಕರ್ನಾಟಕದ ಪರ ಹೋರಾಟಕ್ಕಿಳಿದು ಕೇಂದ್ರದ ಗಮನ ಸೆಳೆಯಬೇಕು. ಬರಗಾಲ ಇರುವುದರಿಂದ ಡ್ಯಾಮ್, ನದಿಗಳಲ್ಲಿ ನೀರಿನ ಕೊರತೆಯಿದ್ದರೂ ನೀರು ಬಿಡುತ್ತಿರುವ ರಾಜ್ಯ ಸರಕಾರದ ಕ್ರಮ ಸರಿಯಲ್ಲ ಎಂದು ಧಿಕ್ಕಾರ ಕೂಗುತ್ತಾ, ತಮಿಳುನಾಡು ಮುಖ್ಯಮಂತ್ರಿಯವರ ಪ್ರತಿಕೃತಿಯನ್ನು ದಹಿಸುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ, ಪಟ್ಟಣದ ಹಳ್ಳದಕೆರಿಯಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಶಿಗ್ಲಿ ಕ್ರಾಸ್‌ನವರೆಗೆ ರಾಜ್ಯ ಹೆದ್ದಾರಿಯನ್ನು ಕೆಲವು ನಿಮಿಷಗಳವರೆಗೆ ಬಂದ್ ಮಾಡಿದ್ದರು.

ಉಪತಹಸೀಲ್ದಾರ ಪ್ರಶಾಂತ ಕಿಮಾಯಿ ಮತ್ತು ಕಂದಾಯ ಅಧಿಕಾರಿ ಬಿ.ಎಂ ಕಾತ್ರಾಳ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಅಮರೇಶ ಗಾಂಜಿ, ಮಾಂತೇಶ ತೋಟ-ದ, ಮಂಜುನಾಥ ಗಾಂಜಿ, ಮಲ್ಲನಗೌಡ ಪಾಟೀಲ, ಚಂದ್ರು ಪಾಣಿಗಟ್ಟಿ, ನಾಶೀರಖಾನ ಕಿತ್ತೂರ, ಸಾಹಿಬ್‌ಲಾಲ್ ಕಲೆಗಾರ, ಮುತ್ತು ಹೆಬ್ಬಾಳ, ಈಶ್ವರಗೌಡ ಪಾಣಿಗಟ್ಟಿ, ಬಾಲಾಜಿ, ತೇಜನಗೌಡ ಸೇರಿದಂತೆ ಅನೇಕರಿದ್ದರು.

ಪಿಎಸ್‌ಐ ಯೂಸೂಫ ಜಮುಲಾ ಹಾಗೂ ಅಪರಾಧ ವಿಭಾಗದ ಪಿಎಸ್‌ಐ ವಿ.ಜಿ ಪವಾರ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಜವಾಬ್ ಭಜನಾ ಸ್ಪರ್ಧೆ ಇಂದು

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಇಲ್ಲಿನ ಜಾತ್ಯಾತೀತ ಶ್ರೀ ಮಹಾಗಣಪತಿ, ಗೌರಿ ಗಣೇಶ ಹಬ್ಬದ ಪ್ರಯುಕ್ತ ಶನಿವಾರ ರಾತ್ರಿ 8 ಗಂಟೆಗೆ ಶಿರಹಟ್ಟಿಯ ಕನಕದಾಸ ವೃತ್ತ ಮ್ಯಾಗೇರಿ ಓಣಿಯಲ್ಲಿ ಪ್ರಥಮ ಬಾರಿಗೆ ಜಿದ್ದಾಜಿದ್ದಿ ಸವಾಲ್-ಜವಾಬ್ ಭಜನಾ ಸ್ಪರ್ಧೆ ಆಯೋಜಿಸಿದ್ದು, ಕುರುಕ್ಷೇತ್ರ ಆಧಾರಿತ ಪಾಂಡವರು ಮತ್ತು ಕೌರವರು ಚಕ್ರವ್ಯೂಹ ಬೇಧಿಸಿದ ಕಥೆಯ ಸಾರಾಂಶದ ಆಧಾರದ ಮೇಲೆ 'ನನ್ನ ನೀ ಗೆಲ್ಲಲಾರೆ' ಕಾರ್ಯಕ್ರಮ ನಡೆಯಲಿದೆ.

ಪ್ರಥಮ ಬಹುಮಾನ 12,001, ದ್ವಿತೀಯ ಬಹುಮಾನ 11,001 ಇದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಶಿರಹಟ್ಟಿಯ ಜ.ಫ.ಸಿದ್ದರಾಮ ಸ್ವಾಮೀಜ